ಸೌಹಾರ್ದ ಸಹಕಾರಿ ಚಳವಳಿಯ ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

# ಸ್ವಾಭಿಮಾನಿ ಸಹಕಾರಿ

Swabhimani Sahakari

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

Volume - 12
Issue - 9
Pages - 20
₹ - 12

December - 2014

- ಸರಕಾರ ಮಾಡುವ ಕೆಲಸವನ್ನೇ ಸಹಕಾರಿ ಸಂಸ್ಥೆಗಳು ಮಾಡುತ್ತಿವೆ
- ಸರಕಾರಗಳು ಸಹಕಾರ ಸಂಸ್ಥೆಗಳ ಮೇಲೆ ಹಿಡಿತ ಸಾಧಿಸುವ ಪ್ರಯತ್ನ ಸಲ್ಲದು.
- ಸಹಕಾರಿಗಳು ಬಲಹೀನರಾಗಬಾರದು.
- ಸಹಕಾರಿ ಸಂಸ್ಥೆಗಳಿಗೆ ಆದಾಯ ತೆರಿಗೆ ಬೇಡ
- ಸಹಕಾರಿಗಳು ನಿಸ್ವಾರ್ಥ ಮನೋಭಾವದಿಂದ ಹಾಗೂ ಪ್ರಾಮಾಣಿಕವಾಗಿ ಸೇವೆ ಸಲ್ಲಿಸುವವರು
- ಸಹಕಾರ ಕ್ಷೇತ್ರಕ್ಕೆ ಪರ್ಯಾಯವಾಗಿ ಬೇರೆ ವ್ಯವಸ್ಥೆ ಇಲ್ಲ
- ಸಹಕಾರಿಗಳು ದೇಶದ ಅರ್ಥವ್ಯವಸ್ಥೆಯಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸುತ್ತಾ ಬಂದಿವೆ
- ಉತ್ತಮ ಆರ್ಥಿಕ ಸಂಘಟನೆಗಳಾಗಿ ಶ್ರೀ ಸಾಮಾನ್ಯರ ಸಾಮಾಜಿಕ ಜೀವನದ ಪರಿವರ್ತನಾ ಕೇಂದ್ರಗಳಾಗಿ ಕಾರ್ಯನಿರ್ವಹಿಸುತ್ತಿವೆ.
- ಸಹಕಾರಿಗಳು ಒಗ್ಗಟ್ಟಿನಿಂದ ಹೋರಾಟ ಮಾಡಬೇಕು



ಸೌಹಾರ್ದ ಸಹಕಾರಿಗಳ ಸಂಖ್ಯೆ : 3030 । 'ಇ' ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ : 702

# "ಆದಾಯ ತೆರಿಗೆ" ಸಹಕಾರಿಗಳ ಒಗ್ಗಟ್ಟಿನ ಹೋರಾಟಕ್ಕೆ ರಾಜ್ಯಪಾಲರ ಮಾರ್ಗದರ್ಶನ ಸ್ವಾಗತಾರ್ಹ



ದಿನಾಂಕ : 20-11-2014 ರಂದು 61ನೇ ಅಖಿಲ ಭಾರತ ಸಹಕಾರ ಸಪ್ತಾಹದ ಅಂಗವಾಗಿ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಬೆಳಗಾವಿಯ ಎಲ್ಲಾ ಸಹಕಾರಿ ಸಂಸ್ಥೆಗಳ ಹಾಗೂ ಸೌಹಾರ್ದ ಸಹಕಾರಿ ಸಂಸ್ಥೆಗಳ ಸಹಕಾರದಿಂದ "ಸಹಕಾರ ಸಂಸ್ಥೆಗಳಲ್ಲಿ ಸದಸ್ಯ ಸೇವೆಗಳನ್ನು ಬಲಪಡಿಸುವಿಕೆ ಮತ್ತು ಭಾಗವಹಿಸುವಿಕೆ" ದಿನ ಹಾಗೂ ಸಪ್ತಾಹದ ಸಮಾರೋಪ ಕಾರ್ಯಕ್ರಮ ಅತ್ಯಂತ ಯಶಸ್ವಿಯಾಗಿ ಹಾಗೂ ಪರಿಣಾಮಕಾರಿಯಾಗಿ ಜರುಗಿ ಜಿಲ್ಲೆಯಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರದ ಕಾರ್ಯಚಟುವಟಿಕೆಗಳ ಬಗ್ಗೆ ಮೆಚ್ಚುಗೆ ಸಾಧಿಸುವಲ್ಲಿ ಮಹತ್ವದ ಹಾಗೂ ಶ್ಲಾಘನೀಯ ಕಾರ್ಯವಾಗಿ ಪರಿವರ್ತಿತವಾದುದು ಸೌಹಾರ್ದ ಸಹಕಾರಿಗಳು ಹೆಮ್ಮೆಪಡುವ ವಿಷಯ.

ಈ ಸಂದರ್ಭದಲ್ಲಿ ರಾಜ್ಯದ ಘನತೆವೆತ್ತ ರಾಜ್ಯಪಾಲರಾದ ಶ್ರೀ ವಜುಭಾಯಿ ವಾಲಾರವರು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಾ, ವಿಶೇಷವಾಗಿ ಸಹಕಾರಿ ಸಂಸ್ಥೆಗಳಿಗೆ ಕೇಂದ್ರ ಸರ್ಕಾರ ಆದಾಯ ತೆರಿಗೆ ವಿಧಿಸುವುದು ಸರಿಯಲ್ಲ. ಸರಕಾರ ಮಾಡುವ ಕೆಲಸವನ್ನೇ ಸಹಕಾರಿ ಸಂಸ್ಥೆಗಳು ಮಾಡುತ್ತಿವೆ. ಸರಕಾರ ಸಹಕಾರಿ ಸಂಸ್ಥೆಗಳಿಗೆ ಪ್ರೋತ್ಸಾಹಿಸಬೇಕು. ಸಹಕಾರಿ ಸಂಸ್ಥೆಗಳು ಪ್ರಾರಂಭವಾಗುವುದಕ್ಕೂ ಮೊದಲು ಸರಕಾರ ನಡೆಯುತ್ತಿತ್ತು. ಈಗಲೂ ನಡೆಯುತ್ತಿದೆ. ಸಹಕಾರ ಸಂಸ್ಥೆಗಳಿಂದ ತೆರಿಗೆ ವಸೂಲಿ ಮಾಡಿ ಸರಕಾರವನ್ನು ನಡೆಸುವ ದುಸ್ಥಿತಿ ಕೇಂದ್ರ ಸರಕಾರಕ್ಕೆ ಬಂದಿಲ್ಲ. ಸಹಕಾರಿಗಳು ಬಲಹೀನರಾಗಬಾರದು. ಒಗ್ಗಟ್ಟಿನಿಂದ ಹೋರಾಟ ಮಾಡಬೇಕು. ಸಂಬಂಧಿಸಿದವರ ಮನವೊಲಿಸುವ ಪ್ರಯತ್ನ ನಿರಂತರ ಪ್ರಯತ್ನ ಮಾಡಬೇಕು. ನಿಮಗೆ ಜಯ ಸಿಗುವುದು ಖಂಡಿತ ಎಂದು ಹೇಳಿದರು.

ಸ್ವತಃ ಸಹಕಾರಿಗಳಾದ ಶ್ರೀಯುತರು 20 ವರ್ಷಗಳ ಕಾಲ ಗುಜರಾತಿನ ರಾಜಕೋಟ ಪಟ್ಟಣ ಸಹಕಾರ ಬ್ಯಾಂಕಿನಲ್ಲಿ ನಿರ್ದೇಶಕರಾಗಿ 8 ವರ್ಷಗಳ ಕಾಲ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ ಅನುಭವದ ಹಿನ್ನೆಲೆಯಲ್ಲಿ ಮಾತನಾಡಿದ ಅವರು ಸಹಕಾರಿಗಳು ನಿಸ್ವಾರ್ಥ ಮನೋಭಾವದಿಂದ ಹಾಗೂ ಪ್ರಾಮಾಣಿಕವಾಗಿ ಸೇವೆ ಸಲ್ಲಿಸುವವರು. ಯಾವುದೇ ಪ್ರತಿಫಲವನ್ನು ಅಪೇಕ್ಷೆ ಇಲ್ಲದವರು. ಸಮಾಜದ ಅಬಲ ವರ್ಗದವರ ಆರ್ಥಿಕ ಅಭಿವೃದ್ಧಿಯ ಗುರಿ ಹೊಂದಿದವರು. ಹೀಗಾಗಿ ಇವರುಗಳಿಗೆ ಸರಕಾರ ಮಾರ್ಗದರ್ಶನ ಹಾಗೂ ಪ್ರೋತ್ಸಾಹ ನೀಡಬೇಕೇ ವಿನಹ ನಿಯಂತ್ರಣ ಸಾಧಿಸುವ ಪ್ರಯತ್ನ ಅನಗತ್ಯ. ಅದಕ್ಕಾಗಿಯೇ 97ನೇ ಸಂವಿಧಾನ ತಿದ್ದುಪಡಿ ಜಾರಿಗೊಳಿಸಲಾಗಿದೆ. ಆದರೂ ಸರಕಾರಗಳು ಸಹಕಾರ ಸಂಸ್ಥೆಗಳ ಮೇಲೆ ಹಿಡಿತ ಸಾಧಿಸಲು ಪ್ರಯತ್ನಿಸುವುದು ಖಂಡನೀಯ ಎಂದು ತಿಳಿಸಿದ ಅವರು ಧೈರ್ಯದಿಂದ ಕಾರ್ಯ ಸಾಧಿಸಿ. ಧೈರ್ಯ ಇಲ್ಲದವರಿಗೆ ಬೆಲೆ ಇರುವುದಿಲ್ಲ. ಎಂದು ಸಹಕಾರಿಗಳಿಗೆ ಧೈರ್ಯ ನೀಡಿ ಮಾರ್ಗದರ್ಶನ ಮಾಡಿರುವುದು ಸ್ವಾಗತಾರ್ಹ ಹಾಗೂ ಶ್ಲಾಘನೀಯ.

ಸಂಯುಕ್ತ ಸಹಕಾರಿಯು ಹಾಗೂ ಸಹಕಾರ ಭಾರತಿಯವರು ಅನೇಕ ವೇದಿಕೆಗಳ ಮುಖಾಂತರ ಸಹಕಾರ ಸಂಸ್ಥೆಗಳಿಗೆ ಆದಾಯ ತೆರಿಗೆ ಬೇಡ, ಸಹಕಾರ ಸಂಸ್ಥೆಗಳು ಸದೃಢವಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುವುದಿಲ್ಲ. ಇದರಿಂದ ಸಹಕಾರಿ ಕ್ಷೇತ್ರಕ್ಕೆ ಹಿನ್ನಡೆಯಾಗುತ್ತದೆ ಎಂದು ತಿಳಿಸುತ್ತಲೇ ಬಂದಿದೆ. ಮಾನ್ಯ ರಾಜ್ಯಪಾಲರ ಈ ಮಾರ್ಗದರ್ಶನ ಹಾಗೂ ಈ ಒತ್ತಾಸೆ ಸಹಕಾರಿಗಳಿಗೆ ಸ್ಫೂರ್ತಿ ತುಂಬಿದಂತಾಗಿದೆ.. ನಮ್ಮ ಪ್ರಯತ್ನಗಳಿಗೆ ಹೆಚ್ಚಿನ ಉತ್ಸಾಹ ಬಂದಿದೆ. ಕೇಂದ್ರ ಸರಕಾರ ಇನ್ನಾದರೂ ಸಹಕಾರ ಸಂಸ್ಥೆಗಳಿಗೆ ಆದಾಯ ತೆರಿಗೆಯಿಂದ ವಿನಾಯಿತಿ ನೀಡುವ ಕ್ರಮವಿಡಲಿ ಎಂದು ಸಂಯುಕ್ತ ಸಹಕಾರಿಯು ಅಪೇಕ್ಷಿಸುತ್ತದೆ.

ಮಾನ್ಯ ರಾಜ್ಯಪಾಲರಿಗೆ ರಾಜ್ಯದ ಎಲ್ಲಾ ಸಹಕಾರಿಗಳ ಪರವಾಗಿ ಧನ್ಯವಾದಗಳು.

"ಸ್ವತಃ ಸಹಕಾರಿಗಳಾದ ಶ್ರೀಯುತರು 20 ವರ್ಷಗಳ ಕಾಲ ಗುಜರಾತಿನ ರಾಜಕೋಟ ಪಟ್ಟಣ ಸಹಕಾರ ಬ್ಯಾಂಕಿನಲ್ಲಿ ನಿರ್ದೇಶಕರಾಗಿ 8 ವರ್ಷಗಳ ಕಾಲ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ ಅನುಭವದ ಹಿನ್ನೆಲೆಯಲ್ಲಿ ಮಾತನಾಡಿದ ಅವರು ಸಹಕಾರಿಗಳು ನಿಸ್ವಾರ್ಥ ಮನೋಭಾವದಿಂದ ಹಾಗೂ ಪ್ರಾಮಾಣಿಕವಾಗಿ ಸೇವೆ ಸಲ್ಲಿಸುವವರು."

▸▸ **ಗುರುನಾಥ ಜಾಂತಿಕರ,** ಅಧ್ಯಕ್ಷರು

**ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ**

**ಶ್ರೀ ಗುರುನಾಥ ಜಾಂತಿಕರ**
ಗೌರವ ಅಧ್ಯಕ್ಷರು

**ಶ್ರೀ ಹೆಚ್.ವಿ.ರಾಜೀವ**
ಗೌರವ ಉಪಾಧ್ಯಕ್ಷರು

**ಶ್ರೀ ಎಸ್.ಆರ್.ಸತೀಶಚಂದ್ರ**
ಗೌರವ ಸದಸ್ಯರು

**ಶ್ರೀ ಶರಣಗೌಡ ಜಿ. ಪಾಟೀಲ್**
ಸಂಪಾದಕರು

**ಶ್ರೀ ವಿ.ಜೆ.ಕಾರಕೂನ**
ಸಂಚಾಲಕರು

**ಶ್ರೀ ರಘುನಂದನ ಕೆ.**
ಸದಸ್ಯರು

**ಒಳ ಪುಟಗಳಲ್ಲಿ . . .**

ಸಹಕಾರಿಗಳಿಗೆ ಸ್ವಾಯತ್ತತೆ ನೀಡುವ ಹಾಗೂ ಸೌಹಾರ್ದ ಸಹಕಾರಿ ಕಾಯ್ದೆ ತಿದ್ದುಪಡಿಗೆ ಸಚಿವರಿಗೆ ಮನವಿ ........ 4

ಸಹಕಾರಿ ಸಂಸ್ಥೆಗಳಿಗೆ ಆದಾಯ ತೆರಿಗೆ ಬೇಡ - ಶ್ರೀ ವಜುಭಾಯಿ ವಾಲಾ ........ 5

ಸಹಕಾರ ಕಾಯ್ದೆಗಳ ತಿದ್ದುಪಡಿಗಾಗಿ ಶ್ರೀ ಲಕ್ಷ್ಮಣ ಸವದಿಯವರಿಂದ ಸಹಕಾರ ಸಚಿವರಿಗೆ ಮನವಿ ........ 6

ಸಪ್ತಾಹದ ಛಾಯಾಚಿತ್ರಗಳು ........ 9

ಸಹಕಾರಿಗಳ ಕಾರ್ಯಕ್ಷಮತೆ ಹೆಚ್ಚಿಸಲು ಪೂರಕ - ಶ್ರೀ ಹೆಚ್.ವಿ.ರಾಜೀವ್ ........ 10

ಸೌಹಾರ್ದ ಸಹಕಾರಿಗಳು ಮಾರುಕಟ್ಟೆಯ ಪೈಪೋಟಿ ನಿರ್ವಹಣೆಗೆ ಸಶಕ್ತರಾಗುವುದು ಅವಶ್ಯಕ - ಶ್ರೀ ಗುರುನಾಥ ಜಾಂತಿಕರ ........ 11

ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಗೆ "ರಾಜ್ಯದ ಅತ್ಯುತ್ತಮ ಕ್ರೆಡಿಟ್ ಸಹಕಾರಿ" ಪುರಸ್ಕಾರ ........ 13

ವೆಬ್‌ಸೈಟ್ ಪರಿಚಯ ಮಾಲಿಕೆ-24 ........ 18

# ಸಂಪಾದಕೀಯ

## ಜನ ಮೆಚ್ಚುಗೆ ಗಳಿಸಿದ ಸೌಹಾರ್ದ ಸಹಕಾರಿಗಳು

ದಿನಾಂಕ : 20-11-2014 61ನೇ ಅಖಿಲ ಭಾರತ ಸಹಕಾರ ಸಪ್ತಾಹದ ಸಮಾರೋಪ ಕಾರ್ಯಕ್ರಮ. ರಾಜ್ಯದ ಸೌಹಾರ್ದ ಸಹಕಾರಿಗಳಿಗೆ ತಮ್ಮ 14 ವರ್ಷಗಳ ಸಾಧನೆಗಳನ್ನು ತಮ್ಮ ವಿವಿಧ ಹಾಗೂ ವೈಶಿಷ್ಠ ಪೂರ್ಣ ಕಾರ್ಯಚಟುವಟಿಕೆಗಳಿಗೆ ಬೆಳಗಾವಿ ಜಿಲ್ಲೆಯ ಎಲ್ಲಾ ಸಹಕಾರಿಗಳ ಸಾರ್ವಜನಿಕರ ಗಮನ ಸೆಳೆಯುವ ಅವಕಾಶವನ್ನು ಉತ್ತಮವಾಗಿ ಉಪಯೋಗಿಸಿಕೊಂಡು ಸೌಹಾರ್ದ ಸಹಕಾರಿ ಕ್ಷೇತ್ರದ ಬಗ್ಗೆ ಅವರುಗಳ ಮೆಚ್ಚುಗೆ ಗಳಿಸಿರುವುದು ಶ್ಲಾಘನೀಯ.

ಬೆಳಗಾವಿ ಜಿಲ್ಲೆ ರಾಜ್ಯದ ಸಹಕಾರ ಕ್ಷೇತ್ರದಲ್ಲಿ ವಿಶಿಷ್ಠ ಸ್ಥಾನವನ್ನು ಹೊಂದಿದೆ. ಸಂಖ್ಯಾತ್ಮಕವಾಗಿ, ವೈಶಿಷ್ಠತೆಯಲ್ಲಿ, ಗುಣಾತ್ಮಕ ಬೆಳವಣಿಗೆಯಲ್ಲಿ ಈ ಜಿಲ್ಲೆಯ ಸಹಕಾರ ಕ್ಷೇತ್ರ ರಾಜ್ಯದಲ್ಲಿ ಪ್ರಥಮ ಸ್ಥಾನವನ್ನು ಪಡೆಯುತ್ತದೆ. ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಯಲ್ಲೂ ಬೆಳಗಾವಿ ಜಿಲ್ಲೆ ಪ್ರಥಮ ಸ್ಥಾನದಲ್ಲಿದೆ. ಸಹಕಾರ ಕ್ಷೇತ್ರದಲ್ಲಿ ಉತ್ತಮ ನಾಯಕತ್ವ, ಸಹಕಾರಿ ತತ್ವಗಳಲ್ಲಿ ನಂಬಿಕೆ, ಕಾರ್ಯ ನಿರ್ವಹಣೆಯಲ್ಲಿ ದಕ್ಷತೆ, ವೃತ್ತಿಪರ ಆಡಳಿತ, ವಿಭಿನ್ನ ಚಿಂತನೆಯನ್ನು ಬೆಳಗಾವಿ ಜಿಲ್ಲೆಯವರು ರೂಢಿಸಿಕೊಂಡಿರುವುದು ಸಹಕಾರ ಕ್ಷೇತ್ರದ ಬೆಳವಣಿಗೆಗೆ ಕಾರಣವಾಗಿದೆ.

ದೊಡ್ಡ ಪ್ರಮಾಣದ ಸಹಕಾರ ಕ್ಷೇತ್ರವನ್ನು ಹೊಂದಿರುವ ಬೆಳಗಾವಿ ಜಿಲ್ಲೆಯಲ್ಲಿ ಸಹಕಾರ ಸಪ್ತಾಹದ ಸಮಾರೋಪ ಕಾರ್ಯಕ್ರಮವನ್ನು ಆಚರಿಸುವ ಅವಕಾಶವನ್ನು ಸದುಪಯೋಗ ಮಾಡಿಕೊಂಡು ಸೌಹಾರ್ದ ಸಹಕಾರಿ ಕ್ಷೇತ್ರದ ಕಾರ್ಯಾಚರಣೆಯ ಬಗ್ಗೆ, ಪ್ರಗತಿಯ ಬಗ್ಗೆ, ಅವಕಾಶಗಳ ಬಗ್ಗೆ ಸಾರ್ವಜನಿಕರಲ್ಲಿ, ಸಹಕಾರಿಗಳಲ್ಲಿ, ಸರಕಾರದ ಹಂತದಲ್ಲಿ ಸಕಾರಾತ್ಮಕ ಚಿಂತನೆಗಳಿಗೆ ಅವಕಾಶವಾಗುವ ಉತ್ತಮ ಭಾವನೆಗಳನ್ನು ಬೆಳೆಸುವ ನಿಟ್ಟಿನಲ್ಲಿ ಸಫಲತೆಯನ್ನು ಪಡೆದಿದೆ ಎಂದು ಭಾವಿಸಬಹುದು. ಯುವಕರಿಗೆ, ಮಹಿಳೆಯರಿಗೆ ಮತ್ತು ಆರ್ಥಿಕವಾಗಿ ಹಿಂದುಳಿದವರಿಗೆ ಈ ಕ್ಷೇತ್ರದಲ್ಲಿ ತಮ್ಮ ಆರ್ಥಿಕ ಹಾಗೂ ಸಾಮಾಜಿಕ ಸ್ಥಿತಿಗತಿಗಳ ಸುಧಾರಣೆಗೆ ವಿಫುಲ ಅವಕಾಶಗಳಿವೆ. ಈ ಅವಕಾಶಗಳನ್ನು ಸದುಪಯೋಗ ಮಾಡಿಕೊಳ್ಳಿ, ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ ಬನ್ನಿ ಎಂಬ ಸಂದೇಶವನ್ನು ನೀಡಿರುವ ಸಮಾರಂಭ. ಅನೇಕರಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರದ ವ್ಯಾಪ್ತಿಗೆ ಬರಮಾಡಿಕೊಳ್ಳುವ ಬಗ್ಗೆ ಪ್ರೇರೇಪಣೆಯಾಗಿರುವುದು ಗಮನಿಸಬೇಕಾದ ವಿಷಯ. ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಗೆ ಸಹಕಾರಿ. ಈ ಕಾರ್ಯದಲ್ಲಿ ಕೈ ಜೋಡಿಸಿದ ಬೆಳಗಾವಿ ಜಿಲ್ಲೆಯ ಎಲ್ಲಾ ಸೌಹಾರ್ದ ಸಹಕಾರಿಗಳಿಗೆ, ಸಹಕಾರಿ ಸಂಸ್ಥೆಗಳಿಗೆ ವಿಶೇಷವಾಗಿ ಈ ಅವಕಾಶವನ್ನು ಒದಗಿಸಿದ ರಾಜ್ಯದ ಸಹಕಾರ ಸಚಿವರಿಗೆ, ಸಹಕಾರ ಮಹಾಮಂಡಳಕ್ಕೆ ಸಂಯುಕ್ತ ಸಹಕಾರಿ ಕೃತಜ್ಞತೆಯನ್ನು ಸಲ್ಲಿಸುತ್ತದೆ. ■

- ಬೆಳಗಾವಿಯಲ್ಲಿ ಸೌಹಾರ್ದ ಸಹಕಾರಿಗಳ ಸಂಭ್ರಮ.
- ವ್ಯವಸ್ಥಿತ ಹಾಗೂ ಶಿಸ್ತುಬದ್ಧ ಸಹಕಾರ ಸಪ್ತಾಹದ ಆಚರಣೆ.
- ಸಹಕಾರಿಗಳಿಂದ ಹಾಗೂ ಅಧಿಕಾರಿಗಳ ಮೆಚ್ಚುಗೆ.
- ಉತ್ತಮ ಸಹಕಾರಿಗಳಿಗೆ ಹಾಗೂ ಸಹಕಾರಿ ಸಂಸ್ಥೆಗಳಿಗೆ ಸನ್ಮಾನ.

# ಸಹಕಾರಿಗಳಿಗೆ ಸ್ವಾಯತ್ತತೆ ನೀಡುವ ಹಾಗೂ ಸೌಹಾರ್ದ ಸಹಕಾರಿ ಕಾಯ್ದೆ ತಿದ್ದುಪಡಿಗೆ ಸಚಿವರಿಗೆ ಮನವಿ













ಸಮಾರೋಪ ಕಾರ್ಯಕ್ರಮವನ್ನು ಬೆಳಗಾವಿ ಜಿಲ್ಲಾ ಪೋಲೀಸ್ ಬ್ಯಾಂಡ್‌ನವರಿಂದ ರಾಷ್ಟ್ರಗೀತೆ ಹಾಗೂ ಶ್ರೀಮತಿ ಸುನಿತಾ ಪಾಟೀಲರವರಿಂದ ನಾಡಗೀತೆಯೊಂದಿಗೆ ಪ್ರಾರಂಭಿಸಲಾಯಿತು. ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಸಹಕಾರ ಇಲಾಖೆ, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ, ಕರ್ನಾಟಕ ತೋಟಗಾರಿಕಾ ಮಹಾಮಂಡಳ, ಬೆಳಗಾವಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್, ಬೆಳಗಾವಿ ಹಾಲು ಉತ್ಪಾದಕರ ಒಕ್ಕೂಟ, ಜಿಲ್ಲೆಯ ಸಹಕಾರ ಸಕ್ಕರೆ ಕಾರ್ಖಾನೆಗಳು, ಜಿಲ್ಲಾ ಸಹಕಾರ ಯೂನಿಯನ್, ಎಲ್ಲಾ ಸಹಕಾರ ಸಂಸ್ಥೆಗಳು, ಸೌಹಾರ್ದ ಸಹಕಾರಿಗಳ ಸಹಯೋಗದಲ್ಲಿ ಬೆಳಗಾವಿಯಲ್ಲಿ ದಿನಾಂಕ 20-11-2014 ರಂದು ಅಖಿಲ ಭಾರತ ಸಹಕಾರ ಸಪ್ತಾಹದ ಸಮಾರೋಪ ಸಮಾರಂಭ ಮತ್ತು "ಸಹಕಾರ ಸಂಸ್ಥೆಗಳಲ್ಲಿ ಸದಸ್ಯ ಸೇವೆಗಳನ್ನು ಬಲಪಡಿಸುವಿಕೆ ಮತ್ತು ಭಾಗವಹಿಸುವಿಕೆ" ದಿನಾಚರಣೆಯನ್ನು ಗಾಂಧಿಭವನದಲ್ಲಿ ಏರ್ಪಡಿಸಲಾಗಿತ್ತು.

# ಸಹಕಾರಿ ಸಂಸ್ಥೆಗಳಿಗೆ ಆದಾಯ ತೆರಿಗೆ ಬೇಡ – ಶ್ರೀ ವಜುಭಾಯಿ ವಾಲಾ




ಕಾರ್ಯಕ್ರಮದ ಉದ್ಘಾಟನೆಯನ್ನು ರಾಜ್ಯದ ಘನತೆವೆತ್ತ ರಾಜ್ಯಪಾಲರಾದ ಶ್ರೀ ವಜುಭಾಯಿ ವಾಲಾರವರು ನೆರವೇರಿಸಿ ಸಹಕಾರಿ ಕ್ಷೇತ್ರದ ಸಾಧನೆಗಳ, ಸವಾಲುಗಳ ಹಾಗೂ ಅವಕಾಶಗಳ ಮೆಲುಕು ಹಾಕುವುದು, ಚಿಂತನೆಗಳನ್ನು ಮಾಡುವುದು, ವಿಚಾರ ವಿನಿಮಯ ಮಾಡುವುದು ಈ ಸಹಕಾರ ಸಪ್ತಾಹದ ಮುಖ್ಯ ಉದ್ದೇಶ. ಇದೊಂದು ಉತ್ತಮವಾದ ಸಮಾರಂಭವಾಗಿದೆ. ಸಹಕಾರಿ ಸಂಸ್ಥೆಗಳು ಸರಕಾರದ ಕೆಲಸವನ್ನೇ ಮಾಡುತ್ತವೆ. ದೇಶದ ಅರ್ಥವ್ಯವಸ್ಥೆಯಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸುತ್ತಾ ಬಂದಿವೆ. ಉತ್ತಮ ಆರ್ಥಿಕ ಸಂಘಟನೆಗಳಾಗಿ ಶ್ರೀ ಸಾಮಾನ್ಯರ ಸಾಮಾಜಿಕ ಜೀವನದ ಪರಿವರ್ತನಾ ಕೇಂದ್ರಗಳಾಗಿ ಕಾರ್ಯನಿರ್ವಹಿಸುತ್ತಿವೆ. ಹೀಗಾಗಿ ಇವುಗಳ ಬಲಸಂವರ್ಧನೆಗೆ ಸರಕಾರ ಕಾರ್ಯನಿರ್ವಹಿಸಬೇಕೆ ವಿನಹ ಇವುಗಳನ್ನು ಹಿಡಿತದಲ್ಲಿಡುವ ಕಾರ್ಯಮಾಡುವುದು ಸರಿಯಲ್ಲ. ಸಹಕಾರಿ ಸಂಸ್ಥೆಗಳಿಗೆ ಆದಾಯ ತೆರಿಗೆ ವಿಧಿಸುವುದು ಸರಿಯಲ್ಲ. ಸಹಕಾರಿಗಳು ಸಂಘಟಿತರಾಗಿ ಹೋರಾಟ ಮಾಡಬೇಕು ಎಂದು ತಿಳಿಸಿದರು. ಸಹಕಾರಿಗಳು ಧೈರ್ಯದಿಂದ ಕೆಲಸ ಮಾಡಬೇಕು. ಸಹಕಾರಿಗಳು ತಮಗಾಗಿ ಏನು ಮಾಡುವುದಿಲ್ಲ. ಸದಸ್ಯರಿಗಾಗಿ ಸಾರ್ವಜನಿಕರಿಗಾಗಿ ಕೆಲಸ ಮಾಡುತ್ತಿರುವುದರಿಂದ ಇಂತಹ ಸಮಾರಂಭಗಳಲ್ಲಿ ಅವರುಗಳ ಉತ್ತಮ ಸೇವೆಯನ್ನು ಸ್ಮರಿಸಿ ಅವರುಗಳನ್ನು ಸನ್ಮಾನಿಸುವ ಕಾರ್ಯ ಹಮ್ಮಿಕೊಂಡಿರುವುದು ಉತ್ತಮ ಕಾರ್ಯ ಎಂದು ತಿಳಿಸಿದರು.

ಸರಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಸಹಕಾರ ಇಲಾಖೆಯ ಪ್ರಭಾರ ಪ್ರಧಾನ ಕಾರ್ಯದರ್ಶಿ ಶ್ರೀ ಮದನಗೋಪಾಲರವರು ಅತಿಥಿ ಗಣ್ಯರನ್ನು ಸ್ವಾಗತಿಸಿ, ಸಮಾರಂಭವನ್ನು ಬಹಳ ಅಚ್ಚುಕಟ್ಟಾಗಿ ವ್ಯವಸ್ಥಿತವಾಗಿ ಸಂಘಟಿಸಲಾಗಿದೆ ಎಂದು ತಿಳಿಸಿದರು.


ಶ್ರೀ ಮದನಗೋಪಾಲ

# ಸೌಹಾರ್ದ ಸಹಕಾರ ಕಾಯ್ದೆ ಅನುಷ್ಠಾನ, ಪರಿಪಕ್ವತೆಗೆ ಕಾಲಾವಕಾಶ ಅಗತ್ಯ : ಶ್ರೀ ಗುರುನಾಥ ಜಾಂತಿಕರ

ಸಹಕಾರ ಸಪ್ತಾಹದ ಸಮಾರೋಪ ಕಾರ್ಯಕ್ರಮದ ಪ್ರಾಸ್ತಾವಿಕ ಭಾಷಣ ಮಾಡಿದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರರವರು ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕಾಯ್ದೆ ಜಾರಿಗೆ ಬಂದು ಕೇವಲ 14 ವರ್ಷಗಳು ಕಳೆದಿವೆ. 55 ವರ್ಷಗಳ ಇತಿಹಾಸವಿರುವ 1959ರ ಸಹಕಾರಿ ಕಾಯ್ದೆಗೆ ಹಲವಾರು ಬಾರಿ ತಿದ್ದುಪಡಿಗಳನ್ನು ಮಾಡಿ ಸಹಕಾರ ಇಲಾಖೆಯ ನಿಯಂತ್ರಣ ಹಾಗೂ ಮಾರ್ಗದರ್ಶನದಲ್ಲಿಯೇ ಕೆಲಸಗಳನ್ನು ನಿರ್ವಹಿಸುತ್ತಿದ್ದಾಗ್ಯೂ ಸಹ ಅನೇಕ ಸಹಕಾರಿ ಸಂಘಗಳಲ್ಲಿ ತಪ್ಪುಗಳು ನಡೆಯುತ್ತಲೇ ಇವೆ. ಆದರೆ ಸೌಹಾರ್ದ ಸಹಕಾರಿ ಕ್ಷೇತ್ರ ಇನ್ನೂ ಪ್ರೌಢಾವಸ್ಥೆಯನ್ನೂ ಸಹ ತಲುಪಿಲ್ಲ. ಆಗಲೇ ಈ ವ್ಯವಸ್ಥೆಯ ಮೇಲೆ ಪ್ರಹಾರ ಮಾಡುವುದು ಸರಿಯಲ್ಲ. ಸಹಕಾರಿಗಳಿಗೆ ನಿಜವಾದ ಸ್ವಾಯತ್ತತೆಯ ಅರ್ಥವಾಗಬೇಕು.



ಪರಿಪಕ್ವತೆಗೆ ಇನ್ನೂ ಹೆಚ್ಚಿನ ಕಾಲಾವಕಾಶ ಕೊಟ್ಟು ನೋಡಬೇಕು. ಪ್ರೋತ್ಸಾಹಿಸಬೇಕು. ತಪ್ಪಿದ್ದಲ್ಲಿ ತಿದ್ದುವ ಕಾರ್ಯವಾಗಬೇಕೇ ವಿನಹ ದೂರುವ ಕೆಲಸ ಮಾಡುವುದು ಸರಿಯಲ್ಲ. ದೇಶದಲ್ಲಿ ಇಂತಹದ್ದೊಂದು ಮಾದರಿ ವ್ಯವಸ್ಥೆ ಇರುವುದು ಸರಕಾರಕ್ಕೆ ಹಾಗೂ ಸಹಕಾರಿಗಳಿಗೆ ಹೆಮ್ಮೆಯ ವಿಷಯ. ಇದನ್ನು ಕಾಯ್ದುಕೊಳ್ಳುವುದರ ಜೊತೆಗೆ ಇದರ ಗುಣಮಟ್ಟವನ್ನು ಸುಧಾರಿಸಲು ಅಗತ್ಯ ಸಲಹೆ ಹಾಗೂ ಮಾರ್ಗದರ್ಶನಗಳನ್ನು ನೀಡುವ ವ್ಯವಸ್ಥೆ ಅಗತ್ಯ ಎಂದು ತಿಳಿಸಿದರು.

### ಸ್ವಾಭಿಮಾನಿ ಸಹಕಾರಿ ವಿಶೇಷ ಸಂಚಿಕೆ ಬಿಡುಗಡೆ

## ಸಹಕಾರ ಕಾಯ್ದೆಗಳ ತಿದ್ದುಪಡಿಗಾಗಿ ಶ್ರೀ ಲಕ್ಷ್ಮಣ ಸವದಿಯವರಿಂದ ಸಹಕಾರ ಸಚಿವರಿಗೆ ಮನವಿ





ಸಮಾರೋಪ ಸಮಾರಂಭದ ಸವಿ ನೆನಪಿಗಾಗಿ ಸ್ವಾಭಿಮಾನಿ ಸಹಕಾರಿ ಮಾಸ ಪತ್ರಿಕೆಯ ವಿಶೇಷ ಸಂಚಿಕೆಯನ್ನು ಬಿಡುಗಡೆ ಮಾಡಿ ಮಾತನಾಡಿದ ಮಾಜಿ ಸಹಕಾರ ಸಚಿವರು, ಶಾಸಕರು ಹಾಗೂ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಲಕ್ಷ್ಮಣ ಸವದಿಯವರು ಬೆಳಗಾವಿ ಜಿಲ್ಲೆಯಲ್ಲಿ ಸಹಕಾರ ಕ್ಷೇತ್ರ ವಿಶಿಷ್ಟ ಹಾಗೂ ವೈವಿಧ್ಯಮಯ ಚಟುವಟಿಕೆಗಳನ್ನು ನಿರ್ವಹಿಸುತ್ತಿರುವ ಸಹಕಾರಿ ಸಂಸ್ಥೆಗಳನ್ನು ಹೊಂದಿರುವುದು ವಿಶೇಷ. ಬೆಳಗಾವಿ ಜಿಲ್ಲೆಯಲ್ಲಿ ಸಹಕಾರ ಸಂಸ್ಥೆಗಳು ಸಂಖ್ಯಾತ್ಮಕವಾಗಿ ಹಾಗೂ ಗುಣಾತ್ಮಕವಾಗಿ ದೇಶದ ಸಹಕಾರಿಗಳ ಹಾಗೂ ಸಾರ್ವಜನಿಕರ ಗಮನ ಸೆಳೆದಿವೆ ಎಂದು ತಿಳಿಸಿದರಲ್ಲದೆ ಸಹಕಾರ ಕ್ಷೇತ್ರದ ಉತ್ತಮ ಕಾರ್ಯನಿರ್ವಹಣೆಗೆ ಸರಕಾರದ ಪ್ರೋತ್ಸಾಹದ ಕಾರ್ಯ ಅಗತ್ಯ. ಸಹಕಾರ ಕಾಯ್ದೆಗಳ ಇತ್ತೀಚಿನ ತಿದ್ದುಪಡಿಗಳಲ್ಲಿ ಕೆಲವು ಆಡಳಿತಾತ್ಮಕ ತೊಂದರೆಗಳಿವೆ. ಅವುಗಳನ್ನು ನಿವಾರಿಸಲು ಸರಕಾರ ಶೀಘ್ರ ಕ್ರಮವಿಡಬೇಕು ಎಂದು ತಿಳಿಸಿದರು ಮತ್ತು ಸಹಕಾರ ಸಚಿವರಿಗೆ ಮನವಿಯನ್ನು ಸಲ್ಲಿಸಿದರು.

## ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಸರಕಾರ ಬದ್ಧ : ಸಹಕಾರ ಸಚಿವ ಶ್ರೀ ಮಹದೇವಪ್ರಸಾದ



ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ರಾಜ್ಯದ ಸಹಕಾರ ಸಚಿವರಾದ ಶ್ರೀ ಹೆಚ್.ಎಸ್.ಮಹದೇವಪ್ರಸಾದರವರು ಸಹಕಾರ ಸಪ್ತವರ್ಣದ ಧ್ವಜಾರೋಹಣ ನೆರವೇರಿಸಿ ಸಮಾರಂಭದಲ್ಲಿ ಮಾತನಾಡುತ್ತಾ ರಾಜ್ಯದ ರೈತರಿಗೆ, ನೇಕಾರರಿಗೆ, ಹಾಲು ಉತ್ಪಾದಕರಿಗೆ ಸಹಕಾರ ಕ್ಷೇತ್ರದ ಮೂಲಕ ಅನೇಕ ಸೌಲಭ್ಯಗಳನ್ನು ನೀಡಲಾಗುತ್ತಿದೆ. ಸಹಕಾರ ಕಾಯ್ದೆಗಳ ಲೋಪದೋಷಗಳನ್ನು ತಿದ್ದುಪಡಿಗೆ ಶೀಘ್ರದಲ್ಲಿಯೇ ಕ್ರಮವಿಡಲಾಗುವುದು. ಸಹಕಾರ ಕ್ಷೇತ್ರದ ಅಭಿವೃದ್ಧಿಗೆ, ಬಲ ಸಂವರ್ಧನೆಗೆ ಸರಕಾರ ಬದ್ಧವಾಗಿದೆ ಎಂದು ತಿಳಿಸಿದರು.

## ಸಹಕಾರ ಕ್ಷೇತ್ರ ಸರ್ವಕಾಲಿಕ ಪ್ರಸ್ತುತ : ಮಹಾಮಂಡಳದ ಅಧ್ಯಕ್ಷ, ಶಾಸಕ ಶ್ರೀ ಜಿ.ಟಿ.ದೇವೇಗೌಡ

ಮಹಾಮಂಡಳದ ಅಧ್ಯಕ್ಷರು ಹಾಗೂ ಶಾಸಕರಾದ ಶ್ರೀ ಜಿ.ಟಿ.ದೇವೇಗೌಡರವರು ಮಾತನಾಡಿ ಸಹಕಾರ ಕ್ಷೇತ್ರದ ಸಾಧನೆಗಳನ್ನು ವಿವರಿಸುತ್ತಾ ಸಹಕಾರ ಕ್ಷೇತ್ರ ಅಪ್ರಸ್ತುತವಾಗುವ ಪ್ರಶ್ನೆಯೇ ಉದ್ಭವವಾಗುವುದಿಲ್ಲ. ಯಾವುದೇ ಸರಕಾರ ಬರಲಿ, ಯಾವುದೇ ಅರ್ಥವ್ಯವಸ್ಥೆ ಜಾರಿಗೆ ಸಹಕಾರ ಕ್ಷೇತ್ರದ ಮೂಲಕವೇ ಸರಕಾರದ ಯೋಜನೆಗಳು ಜಾರಿಯಾಗಬೇಕು. ಸಾರ್ವಜನಿಕರಿಗೆ ಸಹಕಾರ ಕ್ಷೇತ್ರದ ಮೂಲಕವೇ ಸೌಲಭ್ಯಗಳು ಸಿಗಬೇಕು. ಇಂತಹ ಸಹಕಾರ ವ್ಯವಸ್ಥೆಗೆ ಪರ್ಯಾಯ ವ್ಯವಸ್ಥೆಯೇ ಇಲ್ಲವೆಂತಾದಾಗ ಈ ಕ್ಷೇತ್ರದ ಪ್ರಸ್ತುತತೆ ಸರ್ವಕಾಲಿಕ. ಆದ್ದರಿಂದ ಈ ಕ್ಷೇತ್ರವನ್ನು ಬಲಪಡಿಸಲು ಎಲ್ಲಾ ಸರಕಾರಗಳು ಹಾಗೂ ಆಡಳಿತ ಮಂಡಳಿಯವರು ಕ್ರಮವಿಡುವುದು ಅಗತ್ಯ ಎಂದು ತಿಳಿಸಿದರು.





## ಸಹಕಾರ ಕ್ಷೇತ್ರದ ಸಾಧನೆ ಅದ್ವಿತೀಯ : ಸಚಿವ ಶ್ರೀ ಜಾರಕಿಹೊಳಿ

ಸಮಾರಂಭದ ಅಧ್ಯಕ್ಷತೆಯನ್ನು ಅಬಕಾರಿ ಹಾಗೂ ಬೆಳಗಾವಿ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಜಾರಕಿಹೊಳಿಯವರು ವಹಿಸಿ, ಬೆಳಗಾವಿ ಜಿಲ್ಲೆಯ ಸಹಕಾರಿ ಕ್ಷೇತ್ರದ ಸಾಧನೆಗಳನ್ನು ವಿವರಿಸಿ, ಸಹಕಾರ ಕ್ಷೇತ್ರದ ಬಲಸಂವರ್ಧನೆಗೆ ಇಂತಹ ಸಮಾರಂಭಗಳು ಪೂರಕವಾಗುತ್ತವೆ ಎಂದು ತಿಳಿಸಿದರು.

## ಸಹಕಾರ ರತ್ನ ಪ್ರಶಸ್ತಿ

ಕರ್ನಾಟಕ ಸರಕಾರದ 2014ನೇ ಸಾಲಿನ ಪ್ರತಿಷ್ಠಿತ ಸಹಕಾರ ರತ್ನ ಪ್ರಶಸ್ತಿಯನ್ನು ಶಾಸಕರು, ಬಿಜಾಪುರ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಶಿವಾನಂದ ಪಾಟೀಲರವರಿಗೆ ನೀಡಿ ಪುರಸ್ಕರಿಸಲಾಯಿತು. ದಿನಾಂಕ 15-11-2014 ರಂದು ಬೆಂಗಳೂರಿನಲ್ಲಿ ನಡೆದ ಸಮಾರಂಭದಲ್ಲಿ ಡಾ.ಪಿ.ವಿ.ರತ್ನ ಅರಸು, ಶ್ರೀ ಎನ್.ಆರ್. ಜಗದೀಶ, ಶ್ರೀ ಡಿ.ಹನುಮಂತಯ್ಯ, ಶ್ರೀ ಜಯವಂತರಾವ ಪತಂಗೆ ಮತ್ತು ಶ್ರೀ ಎನ್.ಆರ್.ರಂಗಯ್ಯನವರಿಗೆ ನೀಡಲಾಗಿತ್ತು.



## ಡಾ. ಎಸ್.ಎ.ಸಿದ್ಧಾಂತಿಯವರಿಂದ ಉಪನ್ಯಾಸ

"ಸಹಕಾರ ಸಂಸ್ಥೆಗಳಲ್ಲಿ ಸದಸ್ಯ ಸೇವೆಗಳನ್ನು ಬಲಪಡಿಸುವಿಕೆ ಮತ್ತು ಭಾಗವಹಿಸುವಿಕೆ" ಕುರಿತು ಡಾ. ಎಸ್.ಎ.ಸಿದ್ಧಾಂತಿಯವರಿಂದ ಉಪನ್ಯಾಸ ಕಾರ್ಯಕ್ರಮವನ್ನು ಬೆಳಗ್ಗೆ 10-40 ರಿಂದ 11-25ರ ವರೆಗೆ ಏರ್ಪಡಿಸಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಹಿರಿಯ ನಿರ್ದೇಶಕರಾದ ಶ್ರೀ ರಾವ್‌ಸಾಹೇಬ ಅ.ಪಾಟೀಲರವರು ವಹಿಸಿದ್ದರು. ವೇದಿಕೆಯಲ್ಲಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀ ಮಹಾಂತೇಶ ದೊಡ್ಡಗೌಡರರವರು, ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ.ಪಾಟೀಲರವರು ಉಪಸ್ಥಿತರಿದ್ದರು. ಶ್ರೀಮತಿ ಸುನಿತಾ ಪಾಟೀಲ ಹಾಗೂ ವೃಂದದವರಿಂದ ಸುಗಮ ಸಂಗೀತ ಕಾರ್ಯಕ್ರಮವನ್ನು ಬೆಳಗ್ಗೆ 9-30 ರಿಂದ 10-40 ರವರೆಗೆ ಏರ್ಪಡಿಸಲಾಗಿತ್ತು.



ಕೊನೆಯಲ್ಲಿ ರಾಷ್ಟ್ರಗೀತೆಯೊಂದಿಗೆ ಸಮಾರೋಪ ಕಾರ್ಯಕ್ರಮವನ್ನು ಮುಕ್ತಾಯಮಾಡಲಾಯಿತು. ಕಾರ್ಯಕ್ರಮದಲ್ಲಿ ಸಂಸದರಾದ ಶ್ರೀ ಸುರೇಶ ಅಂಗಡಿ, ಶ್ರೀ ಪ್ರಕಾಶ ಹುಕ್ಕೇರಿ, ಮಾಜಿ ಸಂಸದರಾದ ಶ್ರೀ ರಮೇಶ ಕತ್ತಿ, ಮಾಜಿ ಸಚಿವರು ಹಾಗೂ ಶಾಸಕರಾದ ಶ್ರೀ ಉಮೇಶ ಕತ್ತಿ, ಮಾಜಿ ಸಚಿವರು ಹಾಗೂ ಶಾಸಕರು ಸೇರಿದಂತೆ ಸಂಯುಕ್ತ ಸಹಕಾರಿಯ ನಿರ್ದೇಶಕರುಗಳು, ವಿವಿಧ ಮಹಾಮಂಡಳಗಳ ನಿರ್ದೇಶಕರು, ಸಹಕಾರಿ ನಿಬಂಧಕರಾದ ಶ್ರೀ ಎನ್.ಎಸ್.ಚನ್ನಪ್ಪಗೌಡ, ಅಪರ ನಿಬಂಧಕರಾದ ಶ್ರೀಮತಿ ಲಿಜಿ ಫಿಲಿಪ್ಸ್, ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಕೆ.ಎ.ವೆಂಕಟೇಶ್, ಹಾಗೂ ಅಧಿಕಾರಿಗಳು, ಜಂಟಿ ನಿಬಂಧಕರಾದ ಶ್ರೀ ಶಿವ ಕುಲಕರ್ಣಿ, ಉಪ ನಿಬಂಧಕರಾದ ಶ್ರೀ ಕಲ್ಲಪ್ಪ ಓಬಣ್ಣಗೋಳ, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ನಿರ್ದೇಶಕರು, ಪ್ರಧಾನ ವ್ಯವಸ್ಥಾಪಕರಾದ ಶ್ರೀ ಎಸ್.ವಿ.ಹಾದಿಮನಿ ಹಾಗೂ ಅಧಿಕಾರಿಗಳು, ಸಕ್ಕರೆ ಕಾರ್ಖಾನೆಗಳ ಅಧ್ಯಕ್ಷರು ಹಾಗೂ ನಿರ್ದೇಶಕರು, ಜಿಲ್ಲಾ ಹಾಲು ಉತ್ಪಾದಕರ ಒಕ್ಕೂಟದ ಅಧ್ಯಕ್ಷರು ಹಾಗೂ ನಿರ್ದೇಶಕರು, ಜಿಲ್ಲಾ ಯೂನಿಯನ್ ಅಧ್ಯಕ್ಷರು ಹಾಗೂ ನಿರ್ದೇಶಕರು, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ಎಸ್.ವಿ.ಹಿರೇಮಠ, ಸಹಕಾರ ಇಲಾಖೆಯ ಅನೇಕ ಅಧಿಕಾರಿಗಳು, ಜಿಲ್ಲೆಯ ಸಹಕಾರಿ ಸಂಸ್ಥೆಗಳ 4500ಕ್ಕೂ ಹೆಚ್ಚು ಪ್ರತಿನಿಧಿಗಳು, ಸಾರ್ವಜನಿಕರು, ಪತ್ರಕರ್ತರು ಭಾಗವಹಿಸಿದ್ದರು.

ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಹೆಚ್.ವಿ. ರಾಜುರವರು ವಂದನಾರ್ಪಣೆ ನೆರವೇರಿಸಿದರು. ಸಂಯುಕ್ತ ಸಹಕಾರಿಯ ಉಪಪ್ರಧಾನ ವ್ಯವಸ್ಥಾಪಕ ಶ್ರೀ ವೈ.ಕುಮಾರ್ ಹಾಗೂ ಬೆಳಗಾವಿಯ ಕರ್ನಾಟಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯ (ತರಬೇತಿ ಕೇಂದ್ರದ) ಪ್ರಾಧ್ಯಾಪಕಿ ಶ್ರೀಮತಿ ವಸಂತ ಗೀತಾ ಹಿರೇಮಠರವರು ಕಾರ್ಯಕ್ರಮವನ್ನು ನಿರೂಪಿಸಿದರು.

## ಪ್ರದರ್ಶಿನಿ






ಕಾರ್ಯಕ್ರಮದ ಅಂಗವಾಗಿ ಹೊರಾಂಗಣದಲ್ಲಿ ಸಂಯುಕ್ತ ಸಹಕಾರಿ, ಬೆಳಗಾವಿ ಹಾಲು ಉತ್ಪಾದಕರ ಒಕ್ಕೂಟ, ಹುದಲಿ ಖಾದಿ ಸಹಕಾರ ಸಂಘ, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ವತಿಯಿಂದ ಸ್ವ-ಸಹಾಯ ಗುಂಪುಗಳಿಂದ ಪ್ರದರ್ಶಿನಿ ವ್ಯವಸ್ಥೆ ಮಾಡಲಾಗಿತ್ತು.

## ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ 5 ಸಹಕಾರಿ ಸಂಸ್ಥೆಗಳಿಗೆ, ಉತ್ತಮ ಸಹಕಾರಿ ಸಂಸ್ಥೆಗಳು ಹಾಗೂ 5 ಜನರಿಗೆ ಶ್ರೇಷ್ಠ ಸಹಕಾರಿ ಹಾಗೂ ಬೆಳಗಾವಿ ಜಿಲ್ಲೆಯ ಸಹಕಾರ ಕ್ಷೇತ್ರದ ಎಲ್ಲಾ ವಿಭಾಗಗಳಿಗೆ ಮತ್ತು ವಿಶಿಷ್ಠ ಸಹಕಾರ ಸಂಸ್ಥೆಗಳಿಗೆ ಪ್ರಶಸ್ತಿ ಪ್ರಧಾನ.

## ಬೆಳಗಾವಿ ಜಿಲ್ಲೆಯ ಸಹಕಾರಿ ಕ್ಷೇತ್ರದ ವಿವಿಧ ವಿಭಾಗಗಳ 8 ಸಹಕಾರ ಸಂಘಗಳಿಗೆ ಉತ್ತಮ ಸಹಕಾರ ಸಂಘ ಪ್ರಶಸ್ತಿ





ಐನಾಪೂರ ಕೃಷಿ ಪತ್ತಿನ ಸಹಕಾರ ಸಂಘ ನಿ., ಐನಾಪೂರ, ತಾ॥ ಅಥಣಿ, ಹಾಲು ಉತ್ಪಾದಕರ ಸಹಕಾರ ಸಂಘ ನಿ., ಶಿಂದಿಕುರಬೇಟ, ತಾ॥ ಗೋಕಾಕ, ದೈವಜ್ಞ ಕೋ-ಆಪರೇಟಿವ್ ಬ್ಯಾಂಕ್ ನಿ., ಬೆಳಗಾವಿ, ಶಿವಭೋದರಂಗ ಅರ್ಬನ್ ಕೋ-ಆಪ್ ಕ್ರೆಡ್ಟ್ ಸೊಸೈಟಿ ನಿ., ಮೂಡಲಗಿ, ತಾ॥ ಗೋಕಾಕ, ಖಾನಾಪೂರ ತಾಲೂಕ ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ ನಿ., ನಂದಗಡ, ಪ್ರಾಥಮಿಕ ಸಹಕಾರಿ ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿ., ಗೋಕಾಕ, ರಾಣಿ ಚನ್ನಮ್ಮ ಮಹಿಳಾ ಕೋ-ಆಪ್ ಬ್ಯಾಂಕ್ ನಿ., ಬೆಳಗಾವಿ, ಕೃಷ್ಣ ಸಹಕಾರ ಸಕ್ಕರೆ ಕಾರ್ಖಾನೆ ನಿ., ಅಥಣಿ.

**ವಿಶಿಷ್ಠ ಸಹಕಾರ ಸಂಸ್ಥೆಗಳು :** ಮಾಂಗೂರು ಮಹಿಳಾ ಹಾಲು ಉತ್ಪಾದಕರ ಸಹಕಾರ ಸಂಘ, ಘಟಪ್ರಭ ಸಹಕಾರ ಆಸ್ಪತ್ರೆ, ಸಹಕಾರ ಕ್ರೀಡಾ ಶಾಲೆ, ಚಂದರಗಿ, ವಿದ್ಯುತ್ ಉತ್ಪಾದನೆ ಹಾಗೂ ಸರಬರಾಜು ಸಹಕಾರ ಸಂಘ, ಹುಕ್ಕೇರಿ.

## ಸೌಹಾರ್ದ ಸಹಕಾರಿ ಕ್ಷೇತ್ರದ ಪ್ರಶಸ್ತಿಗಳು



### ಉತ್ತಮ ಸಹಕಾರಿ ಸಂಸ್ಥೆಗಳು

- ಚನ್ನಬಸವ ಪತ್ತಿನ ಸೌಹಾರ್ದ ಸಹಕಾರಿ ನಿ., ಗಂಗಾವತಿ.
- ಲಾಲಬಹದ್ದೂರು ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಸಿರಗುಪ್ಪಿ, ತಾ॥ ಅಥಣಿ.
- ಧಾರವಾಡ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಧಾರವಾಡ.
- ಗಂಗೊಳ್ಳಿ ಟೌನ್ ಸೌಹಾರ್ದ ಸಹಕಾರಿ ನಿ., ಗಂಗೊಳ್ಳಿ, ತಾ॥ ಕುಂದಾಪುರ.
- ಸೀತಾರಾಘವ ಸೌಹಾರ್ದ ಸಹಕಾರಿ ಬ್ಯಾಂಕ್ ನಿ. ಹೊಸದುರ್ಗ.



### ಶ್ರೇಷ್ಠ ಸಹಕಾರಿ

- ಶ್ರೀ ಆರ್. ಸತ್ಯ ನಾರಾಯಣ, ಅಧ್ಯಕ್ಷರು, ಜನತಾ ಪತ್ತಿನ ಸೌಹಾರ್ದ ಸಹಕಾರಿ ನಿ., ಸಿಂಧನೂರು.
- ಬಾಳಪ್ಪ ಬಸಪ್ಪ ಬೆಳಕೋಡ, ಅಧ್ಯಕ್ಷರು, ಶ್ರೀ ಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ., ಕಲ್ಲೋಳಿ, ತಾ॥ ಗೋಕಾಕ.
- ಶ್ರೀ ಸುಬ್ರಹ್ಮಣ್ಯ ಜಿ.ಹೆಗಡೆ, ಅಧ್ಯಕ್ಷರು, ಸ್ವೀಸ್ ರೂಟ್ ಸೌಹಾರ್ದ ಸಹಕಾರಿ ನಿ., ಶಿರಸಿ.
- ಶ್ರೀ ಶ್ರೀಧರಮೂರ್ತಿ, ಅಧ್ಯಕ್ಷರು, ವಾಸವಿ ವಿವಿಧೋದ್ದೇಶಗಳ ಸೌಹಾರ್ದ ಸಹಕಾರಿ ನಿ., ಚಿಕ್ಕಮಗಳೂರು.
- ಶ್ರೀ ಎನ್.ಎಸ್. ಜಯಕುಮಾರ್, ಅಧ್ಯಕ್ಷರು, ತುಮಕೂರು ಮರ್ಚೆಂಟ್ ಸೌಹಾರ್ದ ಸಹಕಾರಿ ನಿ., ತುಮಕೂರು.

## ಸಪ್ತಾಹದ ಛಾಯಾಚಿತ್ರಗಳು



ರಾಜ್ಯಪಾಲರಿಗೆ ಸನ್ಮಾನ



ರಾಜ್ಯಪಾಲರೊಡನೆ ಚರ್ಚೆ



ಪ್ರತಿನಿಧಿಗಳು



ಪ್ರತಿನಿಧಿಗಳು





ಕಾರ್ಯಕರ್ತರಿಗೆ ಅಭಿನಂದನೆ

## ದಕ್ಷಿಣ ಕನ್ನಡ ಜಿಲ್ಲೆ ಹಾಗೂ ಉಡುಪಿ ಜಿಲ್ಲೆಗಳ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರ ಅವಲೋಕನಾ ಸಭೆ ಹಾಗೂ ಸೌಹಾರ್ದ ಸಹಕಾರಿಗಳಲ್ಲಿ "ಸಾಲ ಪತ್ರಗಳ ದಾಖಲಾತಿ ಹಾಗೂ ನಿರ್ವಹಣೆಗೆ" ತರಬೇತಿ

# ಸಹಕಾರಿಗಳ ಕಾರ್ಯಕ್ಷಮತೆ ಹೆಚ್ಚಿಸಲು ಪೂರಕ - ಶ್ರೀ ಹೆಚ್.ವಿ.ರಾಜೀವ್





ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ದಕ್ಷಿಣ ಕನ್ನಡ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರ ಅವಲೋಕನಾ ಸಭೆಯನ್ನು ದಿನಾಂಕ : 25.11.2014ರಂದು ಕ್ಯಾಂಪ್ಕೋ ಸಭಾಭವನ, ಮಂಗಳೂರು ಇಲ್ಲಿ ಏರ್ಪಡಿಸಲಾಗಿತ್ತು. ಸಭೆಯ ಉದ್ಘಾಟನೆಯನ್ನು ಶ್ರೀ ಹೆಚ್.ವಿ.ರಾಜೀವ್, ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇವರು ನೆರವೇರಿಸಿ ಪ್ರತಿ ವರ್ಷ ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಗಳನ್ನು ಅವಲೋಕನ ಮಾಡುವ ಹಾಗೂ ಮುಂಬರುವ ವರ್ಷಗಳಲ್ಲಿ ಸೌಹಾರ್ದ ಸಹಕಾರಿಗಳು ಹಮ್ಮಿಕೊಳ್ಳಬಹುದಾದ ಕಾರ್ಯಕ್ರಮಗಳನ್ನು ಚರ್ಚಿಸಿ ಸಹಕಾರಿಗಳ ಕಾರ್ಯಕ್ಷಮತೆಯನ್ನು ಹೆಚ್ಚಿಸುವುದು ಇದರ ಉದ್ದೇಶವಾಗಿದೆ ಎಂದು ತಿಳಿಸಿದರು. ಸಭೆಯ ಅಧ್ಯಕ್ಷತೆಯನ್ನು ಶ್ರೀ ಎಸ್.ಆರ್.ಸತೀಶ್‌ಚಂದ್ರ, ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇವರು ಮಾತನಾಡಿ ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಯ ವೇಗಕ್ಕೆ ಇನ್ನೂ ಹೆಚ್ಚಿನ ಒತ್ತು ಕೊಡುವ ಅವಶ್ಯಕತೆ ಇದೆ. ಸೌಹಾರ್ದ ಸಹಕಾರಿಗಳು ಸಂಖ್ಯಾತ್ಮಕವಾಗಿ ಹಾಗೂ ಗುಣಾತ್ಮಕವಾಗಿ ಬೆಳೆಯುವುದು ಅವಶ್ಯಕ ಎಂದು ತಿಳಿಸಿದರು. ಮುಖ್ಯ ಅಥಿತಿಗಳಾಗಿ ಶ್ರೀ ಹರೀಶ್ ಆಚಾರ್ಯ, ಅಧ್ಯಕ್ಷರು, ಸಹಕಾರ ಯೂನಿಯನ್, ಶ್ರೀ ಸುರೇಶ್ ಭಂಡಾರಿ, ವ್ಯವಸ್ಥಾಪಕ ನಿರ್ದೇಶಕರು, ಕ್ಯಾಂಪ್ಕೋ ಲಿಮಿಟೆಡ್ ಮತ್ತು ಶ್ರೀ ಬಿ.ಕೆ. ಸಲೀಮ, ಸಹಕಾರ ಸಂಘಗಳ ಉಪ ನಿಬಂಧಕರು ಭಾಗವಹಿಸಿದ್ದರು.

ಅವಲೋಕನಾ ಸಭೆಯಲ್ಲಿ ಸಹಕಾರಿಗಳು 2013-14ನೇ ಸಾಲಿನಲ್ಲಿ ನಿರ್ವಹಿಸಿದ ಕಾರ್ಯಚಟುವಟಿಕೆಗಳು, 2014-15ನೇ ಸಾಲಿನಲ್ಲಿ ನಿರ್ವಹಿಸಲಿರುವ ಕಾರ್ಯಕ್ರಮಗಳು, ಸಹಕಾರಿಯ ಸಮಸ್ಯೆಗಳು, ಸಹಕಾರಿಯ ಅಭಿವೃದ್ಧಿಯ ಬಗ್ಗೆ ಸಲಹೆಗಳು, ಸಂಯುಕ್ತ ಸಹಕಾರಿಯ ತರಬೇತಿಯ ಬಗ್ಗೆ ಅನಿಸಿಕೆ/ಸಲಹೆ ಹಾಗೂ ಸೌಹಾರ್ದ ಸಹಕಾರಿಗಳ ಅಭಿವೃದ್ಧಿಗೆ ಪೂರಕವಾಗುವ ಹಾಗೂ ಪ್ರತಿನಿಧಿಗಳ ದಕ್ಷತೆ ಹೆಚ್ಚಿಸುವ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

ಸಭೆಯನ್ನು ವಿಭಾಗೀಯ ಅಧಿಕಾರಿ ಶಿವಕುಮಾರ ಬಿರಾದಾರ ಪ್ರಾಸ್ತಾವಿಕ/ಸ್ವಾಗತವನ್ನು ಮಾಡುವ ಮೂಲಕ ಆರಂಭಿಸಿ ಅಂತಿಮವಾಗಿ ವಂದನಾರ್ಪಣೆಯನ್ನು ಸಲ್ಲಿಸುವ ಮೂಲಕ ಸಮಾರೋಪಗೊಳಿಸಿದರು. ಈ ಸಭೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ 53 ಸೌಹಾರ್ದ ಸಹಕಾರಿಗಳಿಂದ 64 ಪ್ರತಿನಿಧಿಗಳು ಭಾಗವಹಿಸಿದ್ದರು.

# ಸೌಹಾರ್ದ ಸಹಕಾರಿಗಳು ಮಾರುಕಟ್ಟೆಯ ಪೈಪೋಟಿ ನಿರ್ವಹಣೆಗೆ ಸಶಕ್ತರಾಗುವುದು ಅವಶ್ಯಕ – ಶ್ರೀ ಗುರುನಾಥ ಜಾಂತಿಕರ





ದಿನಾಂಕ 12.11.2014 ರಂದು ಉಡುಪಿ ತಾಲ್ಲೂಕು ಇಂಡಸ್ಟ್ರಿಯಲ್ ಕೋ–ಆಪರೇಟಿವ್ ಸೊಸೈಟಿ ಸಭಾಭವನ, ಉಡುಪಿಯಲ್ಲಿ ಅವಲೋಕನಾ ಸಭೆಯನ್ನು ಏರ್ಪಡಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಗುರುನಾಥ ಜಾಂತಿಕರ, ಅಧ್ಯಕ್ಷರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇವರು ನೇರವೇರಿಸಿ ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಗಳು ಜನರ ಹಾಗೂ ಸರಕಾರದ ಗಮನ ಸೆಳೆಯುವಲ್ಲಿ ಯಶಸ್ವಿಯಾಗುತ್ತಿವೆ. ಇದು ಸಂತೋಷದ ಸಮಾಚಾರ ಹಾಗೂ ಹೆಮ್ಮೆ ಪಡುವ ವಿಷಯ. ಇದೇ ಸಂದರ್ಭದಲ್ಲಿ ಸೌಹಾರ್ದ ಸಹಕಾರಿಗಳ ಗುಣಮಟ್ಟವನ್ನು ಕಾಯ್ದುಕೊಳ್ಳುವುದು ಮಹತ್ವದ ವಿಷಯ.

ಹೀಗಾಗಿ ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಗಳನ್ನು ಪ್ರತಿ ವರ್ಷವೂ ಪರಿಶೀಲಿಸಿ ಲೋಪದೋಷಗಳನ್ನು ಸರಿಪಡಿಸಿಕೊಳ್ಳಲು ಸಲಹೆ ಹಾಗೂ ಮಾರ್ಗದರ್ಶನ ನೀಡುವುದರ ಜೊತೆಗೆ ಹೊಸ ಹೊಸ ಯೋಜನೆಗಳ ಅನುಷ್ಠಾನದ ಬಗ್ಗೆ ಮಾಹಿತಿ ನೀಡಿ ಸದಸ್ಯರಿಗೆ ಸೌಹಾರ್ದ ಸಹಕಾರಿಗಳಿಂದ ಮಾರುಕಟ್ಟೆಯಲ್ಲಿ ಸಿಗುವ ಎಲ್ಲಾ ಸೌಲಭ್ಯಗಳನ್ನು ಅಳವಡಿಸಿಕೊಳ್ಳಲು ತಿಳುವಳಿಕೆ ನೀಡುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶ ಎಂದು ತಿಳಿಸಿದರು. ಅಧ್ಯಕ್ಷತೆಯನ್ನು ಶ್ರೀ ಭಾಸ್ಕರ ಕಾಮತ್, ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇವರು ವಹಿಸಿ ಉಡುಪಿ ಜಿಲ್ಲೆಯಲ್ಲಿ 69 ಸೌಹಾರ್ದ ಸಹಕಾರಿಗಳು ಇದ್ದು, ಅವುಗಳಲ್ಲಿ ಒಂದೆರಡನ್ನು ಬಿಟ್ಟರೆ ಉಳಿದವುಗಳೆಲ್ಲ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ಆಗಿಂದಾಗ್ಗೆ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರಿಂದ ಸಹಕಾರಿಗಳನ್ನು ಉತ್ತಮ ಕಾರ್ಯನಿರ್ವಹಿಸಲು ಪ್ರೇರೇಪಿಸಿದಂತಾಗುತ್ತದೆ ಎಂದು ತಿಳಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀ ಎಸ್.ಆರ್. ಸತೀಶ್‌ಚಂದ್ರ, ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಮತ್ತು ಶ್ರೀಮತಿ ಎಮ್.ಜೆ. ಚಂದ್ರಪ್ರತಿಮಾ, ಸಹಕಾರ ಸಂಘಗಳ ಪ್ರಭಾರ ಉಪ ನಿಬಂಧಕರು ಇವರು ವಹಿಸಿದ್ದರು.

ಸಂಪನ್ಮೂಲ ವ್ಯಕ್ತಿಯಾದ ಶ್ರೀ ಎಸ್.ಜಿ. ಜೋಷಿ, ಸಹಕಾರ ಸಂಘಗಳ ಸಹಾಯಕ ನಿಬಂಧಕರು (ನಿ.) ಇವರು "ಸಾಲ ಪತ್ರಗಳ ದಾಖಲಾತಿ ಹಾಗೂ ನಿರ್ವಹಣೆಗೆ" ಸಂಬಂಧಿಸಿದಂತೆ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು/ಮುಖ್ಯಕಾರ್ಯನಿರ್ವಾಹಕರಿಗೆ ಉಪನ್ಯಾಸವನ್ನು ನೀಡಿದರು.

ಅವಲೋಕನಾ ಸಭೆಯಲ್ಲಿ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು/ಮುಖ್ಯಕಾರ್ಯನಿರ್ವಾಹಕರ ಜವಾಬ್ದಾರಿಯ ಕುರಿತು ಮತ್ತು ಉಡುಪಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಪ್ರಗತಿಯ ಪರಿಶೀಲನೆಯನ್ನು ನಡೆಸಲಾಯಿತು. ಸಹಕಾರಿಗಳು 2013–14ನೇ ಸಾಲಿನಲ್ಲಿ ನಿರ್ವಹಿಸಿದ ಕಾರ್ಯಚಟುವಟಿಕೆಗಳು, 2014–15ನೇ ಸಾಲಿನಲ್ಲಿ ನಿರ್ವಹಿಸಲಿರುವ ಕಾರ್ಯಕ್ರಮಗಳು, ಸಹಕಾರಿಯ ಸಮಸ್ಯೆಗಳು, ಸಹಕಾರಿಯ ಅಭಿವೃದ್ಧಿಯ ಬಗ್ಗೆ ಸಲಹೆಗಳು, ಸಂಯುಕ್ತ ಸಹಕಾರಿಯ ತರಬೇತಿಯ ಬಗ್ಗೆ ಅನಿಸಿಕೆ/ಸಲಹೆ ಹಾಗೂ ಸೌಹಾರ್ದ ಸಹಕಾರಿಗಳ ಅಭಿವೃದ್ಧಿಗೆ ಪೂರಕವಾಗುವ ಹಾಗೂ ಪ್ರತಿನಿಧಿಗಳ ದಕ್ಷತೆ ಹೆಚ್ಚಿಸುವ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

ಸಭೆಯನ್ನು ವಿಭಾಗೀಯ ಅಧಿಕಾರಿ ಶಿವಕುಮಾರ ಬಿರಾದಾರ, ಪ್ರಾಸ್ತಾವಿಕ/ಸ್ವಾಗತವನ್ನು ಮಾಡುವ ಮೂಲಕ ಆರಂಭಿಸಿ ಅಂತಿಮವಾಗಿ ವಂದನಾರ್ಪಣೆಯನ್ನು ಸಲ್ಲಿಸುವ ಮೂಲಕ ಸಮಾರೋಪಗೊಳಿಸಿದರು. ಈ ಸಭೆಯಲ್ಲಿ ಉಡುಪಿ ಜಿಲ್ಲೆಯ 53 ಸೌಹಾರ್ದ ಸಹಕಾರಿಗಳಿಂದ 62 ಪ್ರತಿನಿಧಿಗಳು ಭಾಗವಹಿಸಿದ್ದರು.



ಉಡುಪಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರ ಅವಲೋಕನಾ ಸಭೆಯ ಸಂದರ್ಭದಲ್ಲಿ ಉಡುಪಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ವತಿಯಿಂದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರರವರಿಗೆ ಸನ್ಮಾನ.



ಶ್ರೀ ಚಿಗುರು ವಿವಿಧೋದ್ದೇಶಗಳ ಸೌಹಾರ್ದ ಸಹಕಾರಿ ನಿ., ಜಮಖಂಡಿ ಸಹಕಾರಿಯ ಉದ್ಘಾಟನಾ ಸಮಾರಂಭ.

## ಸಂಯುಕ್ತ ಸಹಕಾರಿಯ ಡಿಸೆಂಬರ್–2014ರ ಕಾರ್ಯಕ್ರಮಗಳು

ಬಳ್ಳಾರಿ, ಕೊಪ್ಪಳ ಹಾಗೂ ರಾಯಚೂರು ಜಿಲ್ಲೆಗಳಲ್ಲಿ 2014ರ ಸೌಹಾರ್ದ ಕಾಯ್ದೆ ತಿದ್ದುಪಡಿ, ಚುನಾವಣೆ ಪೂರ್ವ ಸಿದ್ಧತೆ ಕಾರ್ಯಾಗಾರ ಹಾಗೂ ಅವಲೋಕನ ಸಭೆ

**ದಿನಾಂಕ : 11–12–2014** ರಂದು "ಹೊಟೇಲ್ ಆಕಾಶ್ ಪ್ಯಾಲೇಶ", ಪ್ರಿಯದರ್ಶಿನಿ ಹೊಟೇಲ್ ಎದರು, ಸ್ಟೇಶನ್ ರಸ್ತೆ, ಹೊಸಪೇಟೆ, ಇಲ್ಲಿ ಮಧ್ಯಾಹ್ನ 2:30 ಗಂಟೆಗೆ. ಬಳ್ಳಾರಿ ಜಿಲ್ಲೆಯ ಎಲ್ಲಾ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರು ಭಾಗವಹಿಸುವುದು.

**ದಿನಾಂಕ : 12–12–2014** ರಂದು ಗಂಗಾವತಿಯ "ಹೊಟೇಲ್ ಅಶೋಕ, ಸಿ.ಬಿ.ಎಸ್ ಸರ್ಕಲ್, ರಾಯಚೂರು ಕೊಪ್ಪಳ ರಸ್ತೆ, ಗಂಗಾವತಿ" ಇಲ್ಲಿ ಬೆಳಗ್ಗೆ 10:00 ಗಂಟೆಗೆ. ಕೊಪ್ಪಳ ಜಿಲ್ಲೆಯ ಎಲ್ಲಾ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರು ಭಾಗವಹಿಸುವುದು.

**ದಿನಾಂಕ : 12–12–2014** ರಂದು "ಶ್ರೀ ಲಕ್ಷ್ಮೀ ರೆಸಿಡೆನ್ಸಿ, ಐ.ಸಿ.ಐ.ಸಿ.ಐ ಬ್ಯಾಂಕ್ ಎದರು, ಸಿಂಧನೂರು" ಇಲ್ಲಿ ಮಧ್ಯಾಹ್ನ 3:00 ಗಂಟೆಗೆ. ರಾಯಚೂರು ಜಿಲ್ಲೆಯ ಎಲ್ಲಾ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರು ಭಾಗವಹಿಸುವುದು.

## ಕೂಡಲಸಂಗಮದಲ್ಲಿ ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗೆ ವ್ಯಕ್ತಿತ್ವ ವಿಕಸನ ಶಿಬಿರ : ದಿನಾಂಕ ಬದಲಾವಣೆ ಗಮನಿಸಲು ಸೂಚನೆ. ಬದಲಾದ ದಿನಾಂಕ : 18–12–2014 ರಿಂದ 27–12–2014ರ ವರೆಗೆ

ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ರಾಜ್ಯದ ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ ಬಾಗಲಕೋಟೆ ಜಿಲ್ಲೆಯ ಪವಿತ್ರ ಸ್ಥಳವಾದ ಕೂಡಲಸಂಗಮದಲ್ಲಿ ಏರ್ಪಡಿಸಿರುವ 12ನೇ ತಂಡದ ವ್ಯಕ್ತಿತ್ವ ವಿಕಸನ ತರಬೇತಿ ಶಿಬಿರವು ದಿನಾಂಕ 17–12–2014ರ ಬದಲಿಗೆ 18–12–2014 ರಂದು ಪ್ರಾರಂಭವಾಗಿ ದಿನಾಂಕ 27–12–2014 ರಂದು ಮುಕ್ತಾಯಗೊಳ್ಳುತ್ತದೆ.

ಭಾಗವಹಿಸುವ ಎಲ್ಲಾ ಸಹಕಾರಿಗಳಿಗೆ ಹಾಗೂ ಪ್ರತಿನಿಧಿಗಳಿಗೆ ಪ್ರತ್ಯೇಕ ಪ್ರವೇಶ ಪತ್ರ ಕಳುಹಿಸಲಾಗುವುದು. ತರಬೇತಿ ಶಿಬಿರದಲ್ಲಿ ಭಾಗವಹಿಸುವ ಪ್ರತಿನಿಧಿಗಳು ದಿನಾಂಕ 17–12–2014 ಸಾಯಂಕಾಲ ಬರಬಹುದು. ಊಟ, ವಸತಿ ವ್ಯವಸ್ಥೆ ಮಾಡಲಾಗುವುದು. ದಿನಾಂಕ 18–12–2014ರ ಬೆಳಗ್ಗೆ 8–30 ಘಂಟೆಯೊಳಗಾಗಿ ಬಂದು ಸೇರುವ ವ್ಯವಸ್ಥೆ ಮಾಡಿಕೊಳ್ಳಲು ಸೂಚಿಸಿದೆ.

# ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಗೆ "ರಾಜ್ಯದ ಅತ್ಯುತ್ತಮ ಕ್ರೆಡಿಟ್ ಸಹಕಾರಿ" ಪುರಸ್ಕಾರ

ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ.,ವು ದರ್ಬೆಯಲ್ಲಿ ಕೇಂದ್ರ ಕಛೇರಿಯನ್ನು ಹೊಂದಿ ರಾಜ್ಯ ವ್ಯಾಪಿ ಕಾರ್ಯಕ್ಷೇತ್ರವನ್ನು ಹೊಂದಿರುವ ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಗೆ ಸಹಕಾರ ಭಾರತಿ ಆಶ್ರಯದಲ್ಲಿ ದಿನಾಂಕ 01-11-2014 ಮತ್ತು 02-11-2014ರಂದು ಗೋವಾದಲ್ಲಿ ನಡೆದ ರಾಷ್ಟ್ರೀಯ ಮಟ್ಟದ ಕ್ರೆಡಿಟ್ ಸೊಸೈಟಿಗಳ ಸಮಾವೇಶದಲ್ಲಿ "ಕರ್ನಾಟಕ ರಾಜ್ಯದ ಅತ್ಯುತ್ತಮ ಕ್ರೆಡಿಟ್ ಸಹಕಾರಿ"ಯೆಂದು ಪುರಸ್ಕಾರ ನೀಡಲಾಯಿತು.

ಈ ಸಂದರ್ಭದಲ್ಲಿ ಕೇಂದ್ರ ರಕ್ಷಣಾ ಸಚಿವ ಶ್ರೀ ಮನೋಹರ್ ಪರಿಕ್ಕರ್, ಮತ್ತು ಕೇಂದ್ರ ಸಚಿವರಾದ ಶ್ರೀ ನಿತಿನ್ ಗಡ್ಕರಿಯವರು ಉಪಸ್ಥಿತರಿದ್ದರು. ಸಹಕಾರಿಯ ಪರವಾಗಿ ಅಧ್ಯಕ್ಷರಾದ ಶ್ರೀ



ಎಸ್.ಆರ್. ಸತೀಶ್ಚಂದ್ರ, ಉಪಾಧ್ಯಕ್ಷರಾದ ಶ್ರೀ ಅನಂತಕೃಷ್ಣ ನಾಯಕ್, ಪ್ರಧಾನ ವ್ಯವಸ್ಥಾಪಕರಾದ ಶ್ರೀ ವಸಂತ ಎ. ಹಾಗೂ ನಿರ್ದೇಶಕರುಗಳು ಉಪಸ್ಥಿತರಿದ್ದರು.

# ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ದರ್ಬೆ ಸಹಕಾರಿಯ 11ನೇ ಶಾಖೆ ಉದ್ಘಾಟನೆ



ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ದರ್ಬೆ ಸಹಕಾರಿಯ 11ನೇ ಶಾಖೆಯು ಪುತ್ತೂರಿನ ಕಡಬದಲ್ಲಿ ಪುತ್ತೂರು ವಿಧಾನಸಭಾ ಕ್ಷೇತ್ರದ ಶಾಸಕರಾದ ಶ್ರೀಮತಿ ಶಕುಂತಳಾ ಟಿ ಶೆಟ್ಟಿಯವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಪುತ್ತೂರು ಎ.ಪಿ.ಎಂ.ಸಿ.ಯ ಮಾಜಿ ಅಧ್ಯಕ್ಷರಾದ ಶ್ರೀ ಸೀತಾರಾಮ ಗೌಡ ಪೊಸವಳಿಕೆ, ಪುತ್ತೂರು ತಾಲೂಕು ಪಂಚಾಯತ್ ಅಧ್ಯಕ್ಷರಾದ ಶ್ರೀಮತಿ ಪುಲಸ್ಯ ರೈ, ಪುತ್ತೂರು ಎ.ಪಿ.ಎಂ.ಸಿಯ ಅಧ್ಯಕ್ಷರಾದ ಶ್ರೀ ಕೃಷ್ಣ ಶೆಟ್ಟಿ ಕಡಬ, ಕಡಬ ಗ್ರಾಮ ಪಂಚಾಯತ್ ಅಧ್ಯಕ್ಷರಾದ ಶ್ರೀ ಫಜಲ್ ಕೋಡಿಂಬಾಳ, ಕಡಬದ ಉದ್ಯಮಿಗಳು ಹಾಗೂ ಶಾಖಾ ಕಟ್ಟಡದ ಮಾಲೀಕರಾದ ಶ್ರೀ ಸಿ ಪಿಲಿಫ್, ವೈದ್ಯರಾದ ಡಾ. ಸುರೇಶ್ ಕುಮಾರ್ ಕುಡೂರು, ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್ ಆರ್ ಸತೀಶ್ಚಂದ್ರ, ಉಪಾಧ್ಯಕ್ಷರಾದ ಶ್ರೀ ಎಂ ಅನಂತಕೃಷ್ಣ ನಾಯಕ್, ನಿರ್ದೇಶಕರುಗಳು, ಪ್ರಧಾನ ವ್ಯವಸ್ಥಾಪಕರಾದ ಶ್ರೀ ವಸಂತ.ಎ, ಶಾಖಾ ವ್ಯವಸ್ಥಾಪಕರಾದ ಶ್ರೀ ಪ್ರಕಾಶ್ಚಂದ್ರ ರೈ ಇವರುಗಳು ಉಪಸ್ಥಿತರಿದ್ದರು.

# "ಸ್ವಚ್ಛ ಪುತ್ತೂರು - ಸ್ವಚ್ಛ ಶಾಲೆ" ಕಾರ್ಯಕ್ರಮ

ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ ವತಿಯಿಂದ ಪರ್ಲಡ್ಕ ಶಾಲೆಯಲ್ಲಿ "ಸ್ವಚ್ಛ ಪುತ್ತೂರು - ಸ್ವಚ್ಛ ಶಾಲೆ" ಕಾರ್ಯಕ್ರಮ. ಈ ಸಂದರ್ಭದಲ್ಲಿ ಪುತ್ತೂರು ಪುರಸಭೆಯ ಅಧ್ಯಕ್ಷರಾದ ಶ್ರೀ ಜಗದೀಶ್ ಶೆಟ್ಟಿ ನೆಲ್ಲಿಕಟ್ಟೆ, ಆರೋಗ್ಯ ಅಧಿಕಾರಿಗಳಾದ ಶ್ರೀ ರತ್ನ ಪ್ರಸಾದ್, ಸಹಕಾರಿಯ ಪ್ರಧಾನ ವ್ಯವಸ್ಥಾಪಕರಾದ ಶ್ರೀ ವಸಂತ.ಎ, ಶಾಲಾ ಎಸ್.ಡಿ.ಎಂ.ಸಿ. ಅಧ್ಯಕ್ಷರಾದ ಶ್ರೀ ಇಬ್ರಾಹಿಂ ಇವರುಗಳು ಉಪಸ್ಥಿತರಿದ್ದರು. ಶಾಲೆಗೆ ಸಹಕಾರಿ ವತಿಯಿಂದ ಕಸದ ಬುಟ್ಟಿಗಳನ್ನು ನೀಡಲಾಯಿತು (ಚಿತ್ರ 1). "ಸ್ವಚ್ಛ ಪುತ್ತೂರು - ಸ್ವಚ್ಛ ದೇಗುಲ" ಕಾರ್ಯಕ್ರಮದ ಭಾಗವಾಗಿ ಕೆಮ್ಮಿಂಜೆ ದೇಗುಲಕ್ಕೆ ಸಹಕಾರಿಯ ವತಿಯಿಂದ ಕಸದ ಬುಟ್ಟಿಗಳನ್ನು ನೀಡಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಎಂ. ಅನಂತಕೃಷ್ಣ ನಾಯಕ್,





ಹಿರಿಯ ಅಧಿಕಾರಿ ಶ್ರೀ ಶಿವಪ್ರಸಾದ್ ಟಿ, ದೇಗುಲದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷರಾದ ಡಾ. ಪಿ.ಕೆ ಬಾಲಕೃಷ್ಣ, ಉತ್ಸವ ಸಮಿತಿಯ ಅಧ್ಯಕ್ಷರಾದ ಶ್ರೀ ಉದಯ ತಂತ್ರಿ ಇವರುಗಳು ಉಪಸ್ಥಿತರಿದ್ದರು.



ಕರ್ನಾಟಕ ರಾಜ್ಯ ವಿದ್ಯುತ್ ಗುತ್ತಿಗೆದಾರರ ಸೌಹಾರ್ದ ಸಹಕಾರಿ ನಿ., ಕೊಡಿಯಾಲ್ ಬೈಲ್ ಸಹಕಾರಿಯ ಸುರತ್ಕಲ್ ಶಾಖೆಯಲ್ಲಿ ಇ–ಸ್ಟ್ಯಾಂಪಿಂಗ್ ಕೇಂದ್ರದ ಉದ್ಘಾಟನೆ.



ಹಂಸ ಚೈತನ್ಯ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ., ಸಹಕಾರಿಗೆ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತೀಕರರವರು ಭೇಟಿ ನೀಡಿದ್ದ ಸಂದರ್ಭದಲ್ಲಿ ಸನ್ಮಾನ.



ಶ್ರೀ ಸಾಯಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಚಿಕ್ಕೋಡಿ ಸಹಕಾರಿಯ ಇ–ಸ್ಟ್ಯಾಂಪಿಂಗ್ ಕೇಂದ್ರದ ಪ್ರಾರಂಭ.



ಸ್ವಸ್ತಿಕ್ ಪ್ರಗತಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಬೆಂಗಳೂರು ಸಹಕಾರಿಯ ಇ–ಸ್ಟ್ಯಾಂಪಿಂಗ್ ಕೇಂದ್ರವನ್ನು ಮಾನ್ಯ ಶಾಸಕರಾದ ಶ್ರೀ ಎಸ್ ಸುರೇಶ್‌ಕುಮಾರ್‌ರವರಿಂದ ಉದ್ಘಾಟನೆ.



ದಿ ಪಾವಗಡ ಸೌಹಾರ್ದ ಮಲ್ಟಿಪರ್ಪಸ್ ಕೋ–ಆಪರೇಟಿವ್ ಲಿ., ಕೋಲಾರ ಸಹಕಾರಿಯ ನವೀಕರಣಗೊಂಡ ಪಾವಗಡ ಶಾಖೆಯು ಪರಮಪೂಜ್ಯ ಸ್ವಾಮಿಗಳಾದ ಶ್ರೀ ಜಪಾನಂದ ಸ್ವಾಮಿಗಳು, ಅಧ್ಯಕ್ಷರು, ಸ್ವಾಮಿ ವಿವೇಕಾನಂದ ಗ್ರಾಮಾಂತರ ಸಂಘಟಿತ ಆರೋಗ್ಯ ಕೇಂದ್ರ, ಪಾವಗಡ ಇವರಿಂದ ಉದ್ಘಾಟನೆ.



ಶ್ರೀ ಮಹಾದೇವ ಸೌಹಾರ್ದ ಪತ್ತಿನ ಸಹಕಾರಿ ನಿ., ಗುಲ್ಬರ್ಗಾ ಸಹಕಾರಿಯಲ್ಲಿ ನವೆಂಬರ್ 14 ರಂದು ಸಹಕಾರ ಸಪ್ತಾಹ ದಿನಾಚರಣೆಯ ಆಚರಣೆ.

**ಸಂಯುಕ್ತ ಸಹಕಾರಿಯ ಬೆಳಗಾವಿ ವಿಭಾಗೀಯ ಕಛೇರಿಯ ವಿಳಾಸ ಬದಲಾವಣೆ :**

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**

ಬೆಳಗಾವಿ ವಿಭಾಗೀಯ ಕಛೇರಿ

ಪಿ & ಟಿ ಕ್ವಾಟರ್ಸ್ ಎದುರಿಗೆ, ಮಹಾತೇಂಶ ನಗರ,

ಬೆಳಗಾವಿ–590 017. ದೂರವಾಣಿ : 0831–2401551



ಹೂಗಾರ ವಿವಿಧೋದ್ದೇಶಗಳ ಸೌಹಾರ್ದ ಸಹಕಾರಿ ನಿ., ಹುಬ್ಬಳ್ಳಿ ಸಹಕಾರಿಯ ಉದ್ಘಾಟನಾ ಸಮಾರಂಭ. ಈ ಸಂದರ್ಭದಲ್ಲಿ ಪೂಜ್ಯ ಶ್ರೀ ಬಸವಲಿಂಗ ಸ್ವಾಮಿಗಳು, ರುದ್ರಾಕ್ಷಿ ಮಠ, ಹುಬ್ಬಳ್ಳಿ, ಪೂಜ್ಯ ಶ್ರೀ ರಾಜೇಂದ್ರ ಸ್ವಾಮಿಗಳು, ಶಿಗ್ಗಾವಿ ಮಠ, ಹುಬ್ಬಳ್ಳಿ–ಹಂದಿಗುಂದ, ಶ್ರೀ ದಿನೇಶ್ ಗುಂಡೂರಾವ್, ಆಹಾರ ಮತ್ತು ನಾಗರೀಕ ಪೂರೈಕೆ ಹಾಗೂ ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವರು, ಶ್ರೀ ಜಗದೀಶ್ ಶೆಟ್ಟರ್, ಮಾಜಿ ಮುಖ್ಯಮಂತ್ರಿಗಳು ಹಾಗೂ ವಿರೋಧ ಪಕ್ಷದ ನಾಯಕರು, ವಿಧಾನಸಭೆ, ಇನ್ನೂ ಅನೇಕ ಶಾಸಕರು, ಸಂಸದರು, ವಿಧಾನ ಪರಿಷತ್ ಸದಸ್ಯರು ಉಪಸ್ಥಿತರಿದ್ದರು.



ವಿಕಾಸ ಜ್ಯೋತಿ ಪತ್ತಿನ ಸೌಹಾರ್ದ ಸಹಕಾರಿ ನಿ., ಯಲಬುರ್ಗಾ ಸಹಕಾರಿಯ ಹಿರೇವಂಕಲಕುಂಟಾ ಶಾಖೆಯ ಉದ್ಘಾಟನೆ.



ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜು ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಮೈಸೂರು ಸಹಕಾರಿಯ ಪೂಜಾ ಭಾಗವತ್ ಸ್ನಾತಕೋತ್ತರ ಕೇಂದ್ರದಲ್ಲಿ ಶಾಖೆಯ ಉದ್ಘಾಟನೆ.





ಶ್ರೀ ಕನ್ಯಕಾಪರಮೇಶ್ವರಿ ಸೌಹಾರ್ದ ಸಹಕಾರಿ ನಿ., ಚಿತ್ರದುರ್ಗ ಸಹಕಾರಿಯಲ್ಲಿ ದಿನಾಂಕ 14.11.2014ರಂದು 61ನೇ ಅಖಿಲ ಭಾರತ ಸಹಕಾರ ಸಪ್ತಾಹದ ಆಚರಣೆ. ಸಹಕಾರ ಸಪ್ತಾಹದ ಪ್ರಯುಕ್ತ ದಿನಾಂಕ 18.11.2014ರಂದು ಸಹಕಾರಿಯ ಅಂಬೇಡ್ಕರ್ ಸರ್ಕಲ್ ಶಾಖಾ ಕಛೇರಿಯಲ್ಲಿ ರಕ್ತದಾನ ಶಿಬಿರದ ಆಯೋಜನೆ.

## ಷೇರು ಹಣ ಸಂಗ್ರಹಣೆ ಅನುಮತಿ ವಾಪಸ್

- ಉದ್ದೇಶಿತ ವಿಶ್ವಬಂಧು ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಮೈಸೂರು ಇದಕ್ಕೆ ಪ್ರಾರಂಭಿಕ ಷೇರು ಸಂಗ್ರಹಣೆಗಾಗಿ ನೀಡಲಾಗಿದ್ದ ಅನುಮತಿಯನ್ನು ಸಹಕಾರಿಗಳ ಜಂಟಿ ನಿಬಂಧಕರ ಕಛೇರಿ ಪತ್ರ ಸಂಖ್ಯೆ ಜೆಆರ್‌ಎಂ/ಎಸ್7/ಸೌಸ/182/2013–14 ದಿನಾಂಕ 09.10.2014ರಂತೆ ರದ್ದುಪಡಿಸಲಾಗಿದೆ. ಈ ಹಿನ್ನೆಲೆಯಲ್ಲಿ ಮುಖ್ಯ ಪ್ರವರ್ತಕರು ಯಾರಿಂದಲೂ ಕೂಡ ಷೇರು ಸಂಗ್ರಹಣೆ ಮಾಡಬಾರದೆಂದು ಎಂದು ಕೆ.ಎಂ.ಆಶಾ, ಸಹಕಾರಿಗಳ ಜಂಟಿ ನಿಬಂಧಕರು, ಮೈಸೂರು ಪ್ರಾಂತ, ಮೈಸೂರು ಇವರು ಆದೇಶಿಸಿದ್ದಾರೆ.

- ಉದ್ದೇಶಿತ ಕೆನರಾ ವೆಲ್ ಫ್ಯೂಚರ್ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಮೈಸೂರು ಇದಕ್ಕೆ ಪ್ರಾರಂಭಿಕ ಷೇರು ಸಂಗ್ರಹಣೆಗಾಗಿ ನೀಡಲಾಗಿದ್ದ ಅನುಮತಿಯನ್ನು ಸಹಕಾರಿಗಳ ಜಂಟಿ ನಿಬಂಧಕರ ಕಛೇರಿ ಪತ್ರ ಸಂಖ್ಯೆ ಜೆಆರ್‌ಎಂ/ಎಸ್7/ಸೌಸ/24/2014–15 ದಿನಾಂಕ : 09.10.2014ರಂತೆ ರದ್ದುಪಡಿಸಲಾಗಿದೆ. ಈ ಹಿನ್ನೆಲೆಯಲ್ಲಿ ಮುಖ್ಯ ಪ್ರವರ್ತಕರು ಯಾರಿಂದಲೂ ಕೂಡ ಷೇರು ಸಂಗ್ರಹಣೆ ಮಾಡಬಾರದೆಂದು ಎಂದು ಕೆ.ಎಂ.ಆಶಾ, ಸಹಕಾರಿಗಳ ಜಂಟಿ ನಿಬಂಧಕರು, ಮೈಸೂರು ಪ್ರಾಂತ, ಮೈಸೂರು ಇವರು ಆದೇಶಿಸಿದ್ದಾರೆ.

# Guidelines for Licensing of Small Finance Banks in the Private Sector

Compiled by : **K.Vittal Shetty,** DJ&PR, CAIIB, DBM (IIB), MBM (Former Chief General Manager & CEO of SUCO BANK)

In the Union Budget 2014-2015 presented on July 10, 2014, the Hon'ble Finance Minister announced that:

"After making suitable changes to current framework, a structure will be put in place for continuous authorization of universal banks in the private sector in the current financial year. RBI will create a framework for licensing small banks and other differentiated banks. Differentiated banks serving niche interests, local area banks, payment banks etc. are contemplated to meet credit and remittance needs of small businesses, unorganized sector, low income households, farmers and migrant work force".

Accordingly, the draft guidelines for licensing of small finance Banks in the private sector were formulated and released for public comments on July 17, 2014. Based on the comments and suggestions received from the public on the draft guidelines, RBI has issued final guidelines for granting license for small finance banks in the private sector on 27 November, 2014.

**The salient features of the guidelines are as follows :**

SMALL FINANCE BANKS can play an important role in providing credit to micro and small enterprises, agriculture and banking services in unbanked and under-banked areas in the country, the RBI has decided to licence new "small finance banks" in the private sector. While permitting small banks, however, the issues relating to their size, capital requirements, area of operations, exposure norms, regulatory prescriptions, corporate governance and resolution need to be suitably addressed in the light of experience gained.

**1. Registration, licensing and regulations :** The small finance bank shall be registered as a public limited company under the Companies Act, 2013. It will be licensed under Section 22 of the Banking Regulation Act, 1949 and governed by the provisions of the Banking Regulation Act, 1949; Reserve Bank of India Act, 1934; Foreign Exchange Management Act, 1999; Payment and Settlement Systems Act, 2007; Credit Information Companies (Regulation) Act, 2005; Deposit Insurance and Credit Guarantee Corporation Act, 1961. The small finance banks will be given scheduled bank status once they commence their operations, and found suitable as per Section 42 (6) (a) of the Reserve Bank of India Act, 1934.

**2. Objectives :** The objectives of setting up of small finance banks will be for furthering financial inclusion by

(i) Provision of savings vehicles primarily to unserved and underserved sections of the population, and

(ii) Supply of credit to small business units; small and marginal farmers; micro and small industries; and other unorganised sector entities, through high technology-low cost operations.

**3. Eligible promoters :** Resident individuals/professionals with 10 years of experience in banking and finance; and Companies and Societies owned and controlled by residents will be eligible as promoters to set up small finance banks. Existing Non-Banking Finance Companies (NBFCs), Micro Finance Institutions (MFIs), and LABs that are owned and controlled by residents can also opt for conversion into small finance banks after complying with all legal and regulatory requirements of various authorities and if they conform to these guidelines. However, joint ventures by different promoter groups for the purpose of setting up small finance banks would not be permitted. As local focus and the ability to serve smaller customers will be the key criteria in licensing such banks, this may be a more appropriate vehicle for local players or players who are focussed on lending to unserved / underserved sections of the society. Accordingly, proposals from large public sector entities and industrial and business houses, including from NBFCs promoted by them, will not be entertained.

RBI would assess the 'fit and proper' status of the applicants on the basis of their past record of sound credentials and integrity; financial soundness and successful track record of professional experience or of running their businesses, etc. for at least a period of five years.

**4. Scope of activities :** The small finance bank, in furtherance of the objectives for which it is set up, shall primarily undertake basic banking activities of acceptance of deposits and lending to unserved and underserved sections including small business units, small and marginal farmers, micro and small industries and unorganised sector entities. It can also undertake other non-risk sharing simple financial services activities, not requiring any commitment of own fund, such as distribution of mutual fund units, insurance products, pension products, etc. with the prior approval of the RBI and after complying with the requirements of the sectoral regulator for such products. The small finance bank can also become a Category II Authorised Dealer in foreign exchange business for its clients' requirements. It cannot set up subsidiaries to undertake non-banking financial services activities.

The annual branch expansion plans of the small finance banks for the initial five years would need prior approval

of RBI. The annual branch expansion plans should be in compliance with the requirement of opening at least 25 per cent of its branches in unbanked rural centres (population up to 9,999 as per the latest census).

There will not be any restriction in the area of operations of small finance banks; however, preference will be given to those applicants who in the initial phase set up the bank in a cluster of under-banked States / districts, such as in the North-East, East and Central regions of the country. These applicants will not have any hindrance to expand to other regions in due course. It is expected that the small finance bank should primarily be responsive to local needs. After the initial stabilisation period of five years, and after a review, RBI may liberalize the requirement of prior approval for annual branch expansion plans and scope of activities of the small finance banks.

The other financial and non-financial services activities of the promoters, if any, should be kept distinctly ring-fenced and not comingled with the banking business.

The small finance bank will be required to use the words "Small Finance Bank" in its name in order to differentiate it from other banks.

**5. Capital requirement :** The minimum paid-up equity capital for small finance banks shall be Rs. 100 crore. In view of the inherent risk of a small finance bank, it shall be required to maintain a minimum capital adequacy ratio of 15 per cent of its risk weighted assets (RWA) on a continuous basis, subject to any higher percentage as may be prescribed by RBI from time to time. Tier I capital should be at least 7.5 per cent of RWAs. Tier II capital should be limited to a maximum of 100 per cent of total Tier I capital. As small finance banks are not expected to deal with sophisticated products, the capital adequacy ratio will be computed under Basel Committee's standardised approaches. ■

# ದಿನಾಂಕ : 27, 28 ಡಿಸೆಂಬರ್ 2014 ಸಹಕಾರ ಭಾರತಿ, ಕರ್ನಾಟಕ ರಾಜ್ಯದ ಪ್ರಥಮ ಸಮ್ಮೇಳನ, ಕೂಡಲಸಂಗಮ

ಸಹಕಾರ ಭಾರತಿ, ಕರ್ನಾಟಕ ರಾಜ್ಯದ ಪ್ರಥಮ ಸಮ್ಮೇಳನವನ್ನು ದಿನಾಂಕ 27, 28 ಡಿಸೆಂಬರ್ 2014 ರಂದು ಕೂಡಲಸಂಗಮದಲ್ಲಿ ನಡೆಸಲಾಗುತ್ತಿದೆ ಎಂದು ಸಹಕಾರ ಭಾರತಿಯ ಸಮ್ಮೇಳನದ ಸ್ವಾಗತ ಸಮಿತಿಯ ಮುಖ್ಯ ಸಂಚಾಲಕರಾದ ಶ್ರೀ ರಮೇಶ ವೈದ್ಯರವರು ಹಾಗೂ ಸಂಚಾಲಕರಾದ ಶ್ರೀ ಎಂ.ಜಿ.ಪಾಟೀಲ್‌ರವರು ತಿಳಿಸಿದ್ದಾರೆ. ಈ ಕಾರ್ಯಕ್ರಮವನ್ನು ರಾಜ್ಯದ ಘನತೆವೆತ್ತ ರಾಜ್ಯಪಾಲರಾದ ಶ್ರೀ ವಾಜುಭಾಯಿ ವಾಲಾರವರು ಉದ್ಘಾಟಿಸಲಿದ್ದಾರೆ. ಕೇಂದ್ರದ ಕೃಷಿ ಹಾಗೂ ಸಹಕಾರ ಸಚಿವರು, ರಾಜ್ಯದ ಸಹಕಾರ ಸಚಿವರು, ಅನೇಕ ಗಣ್ಯರು, ಸಹಕಾರಿ ಮುಖಂಡರುಗಳು, ಹತ್ತು ಸಾವಿರಕ್ಕೂ ಹೆಚ್ಚು ವಿವಿಧ ಸಹಕಾರಿ ಸಂಘಗಳ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ.

ಈ ಸಮ್ಮೇಳನದ ಸ್ವಾಗತ ಸಮಿತಿಯ ಗೌರವ ಅಧ್ಯಕ್ಷರಾಗಿ ಮಾಜಿ ಸಚಿವರು ಹಾಗೂ ಶಾಸಕರಾದ ಶ್ರೀ ಗೋವಿಂದ ಕಾರಜೋಳ, ಕಾರ್ಯಾಧ್ಯಕ್ಷರಾಗಿ ಮಾಜಿ ಸಚಿವರು ಹಾಗೂ ಶಾಸಕರಾದ ಶ್ರೀ ಲಕ್ಷ್ಮಣ್ ಸವದಿ, ಉಪಾಧ್ಯಕ್ಷರುಗಳಾಗಿ ಲೋಕಸಭಾ ಸದಸ್ಯರುಗಳಾದ ಶ್ರೀ ರಮೇಶ್ ಜಿಗಜಿಣಗಿ, ಶ್ರೀ ಪಿ. ಸಿ. ಗದ್ದಿಗೌಡರ, ಶ್ರೀ ಸಂಗಣ್ಣ ಕರಡಿ, ಎಸ್.ಎಲ್.ಡಿ. ಬ್ಯಾಂಕ್‌ನ ಮಾಜಿ ಅಧ್ಯಕ್ಷರಾದ ಶ್ರೀ ಚೊಕ್ಕಬಸವನಗೌಡರು, ಬಿ.ಡಿ.ಸಿ.ಸಿ. ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಅಜಯಕುಮಾರ ಸರನಾಯಕ, ಮಾಜಿ ಶಾಸಕರಾದ ಶ್ರೀ ವೆಂಕಟರಾವ್ ನಾಡಗೌಡ. ಅರಿಹಂತ ಸೌಹಾರ್ದ ಸಹಕಾರಿ ನಿ., ಬೋರಗಾಂವದ ಅಧ್ಯಕ್ಷರಾದ ಶ್ರೀ ರಾವ್ ಸಾಹೇಬ್ ಪಾಟೀಲ, ಕ್ಯಾಂಪ್ಕೋ, ಮಂಗಳೂರು ಅಧ್ಯಕ್ಷರಾದ ಶ್ರೀ ಕೊಂಕೋಡಿ ಪದ್ಮನಾಭ, ಪ್ರಧಾನ ಕಾರ್ಯದರ್ಶಿಯಾಗಿ ಶ್ರೀ ಅರವಿಂದ ಮಂಗಳೂರು, ಕಾರ್ಯದರ್ಶಿಗಳಾಗಿ ಶ್ರೀ ರಾಜಶೇಖರ ಶೀಲವಂತರ, ಶ್ರೀಮತಿ ಡಾ॥ ಅರುಣಾ ಅಕ್ಕಿ, ಶ್ರೀ ಹಾಲಪ್ಪಾಚಾರ ಎಂ.ಎಲ್.ಸಿ, ಖಜಾಂಚಿಯಾಗಿ ಶ್ರೀ ಪ್ರಹ್ಲಾದರಾಜ ರಂಗಪ್ಪಯ್ಯ ದೇಸಾಯಿ, ಸಹಕಾರ ಭಾರತಿ ರಾಷ್ಟ್ರೀಯ ಅಧ್ಯಕ್ಷರಾದ ಶ್ರೀ ಸತೀಶ ಮರಾಠೆ ಹಾಗೂ ಪದಾಧಿಕಾರಿಗಳಾದ ಶ್ರೀ ನರಸಿಂಹ ನಾಯಕರು, ಅಧ್ಯಕ್ಷರು, ಸಹಕಾರ ಭಾರತಿ, ಕರ್ನಾಟಕ, ಶ್ರೀ ಸತೀಶ್ಚಂದ್ರ, ಸಂಘಟನಾ ಕಾರ್ಯದರ್ಶಿಗಳು, ಸಹಕಾರ ಭಾರತಿ, ಕರ್ನಾಟಕ, ಶ್ರೀ ಜೀತುಬಾಯಿ ವ್ಯಾಸ, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ, ಶ್ರೀ ಗುರುನಾಥ ಜಾಂತೀಕರ, ಪ್ರಧಾನ ಕಾರ್ಯದರ್ಶಿ, ಸಹಕಾರ ಭಾರತಿ, ಕರ್ನಾಟಕ, ಶ್ರೀ ವಿಜಯ ದೇವಾಂಗನ, ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಮುಂತಾದ ಅನೇಕ ಸಹಕಾರಿ ಸಂಸ್ಥೆಗಳ ಮುಖಂಡರುಗಳು ಕಾರ್ಯನಿರ್ವಹಿಸುತ್ತಾರೆ. ಸಮ್ಮೇಳನದ ಸ್ಮರಣ ಸಂಚಿಕೆಗೆ ಜಾಹೀರಾತು, ಲೇಖನ, ಸಾಹಿತ್ಯಗಳನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸಲು ಸೂಚಿಸಿದ್ದಾರೆ.

**ಸಹಕಾರ ಭಾರತಿ ಕರ್ನಾಟಕ ಸಮ್ಮೇಳನ ಕಾರ್ಯಾಲಯ :** ವಿ.ಸಿ. ಅಕ್ಕಿಸ್ಮಾರಕ ಸಂಘ ಜೋಶಿ ಗಲ್ಲಿ, ಪ್ರವಾಸಿಮಂದಿರ ಎದುರು, ಇಳಕಲ್, ಹುನಗುಂದ ತಾಲೂಕ್, ಬಾಗಲಕೋಟೆ ಜಿಲ್ಲೆ.

e-mail : drarunasahakarbharati@gmail.com



ಸಹಕಾರಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಲು ಕೋರಿದ್ದಾರೆ.

# ರಾಷ್ಟ್ರೀಯ ಸಹಕಾರ ಆಡಳಿತ ತರಬೇತಿ ಸಂಸ್ಥೆ (Vaikuntha Mehta Institute of Co operative Managment Poona)

**http://vamnicom.gov.in**

■ ರಘುನಂದನ ಕೆ.
ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.


ವಿಶ್ವದ ಅತಿ ದೊಡ್ಡ ಸಹಕಾರ ಕ್ಷೇತ್ರವನ್ನು ಹೊಂದಿರುವ ಭಾರತದಲ್ಲಿ ಸಹಕಾರ ಕ್ಷೇತ್ರದಲ್ಲಿ ನೇರವಾಗಿ ಉದ್ಯೋಗದಲ್ಲಿ ತೊಡಗಿರುವವರ ಸಂಖ್ಯೆ ನಲವತ್ತು ಲಕ್ಷಕ್ಕೂ ಹೆಚ್ಚು. ಸಹಕಾರ ಚಳುವಳಿ, ಆರಂಭದಲ್ಲಿ ಗ್ರಾಮೀಣ ಭಾಗವನ್ನು ಕೇಂದ್ರೀಕರಿಸಿಕೊಂಡು ಅಭಿವೃದ್ಧಿಯ ಸಾಧ್ಯತೆಯಾಗಿ ಬೆಳೆದು ಬಂದರೂ, 1991ರ ನಂತರದಲ್ಲಿ ಜಾಗತೀಕರಣ, ಖಾಸಗೀಕರಣ, ಉದಾರೀಕರಣಗಳ ನೂತನ ಆರ್ಥಿಕ ಸುಧಾರಣೆಗಳಿಗೆ ಭಾರತ ಅವಕಾಶ ಮಾಡಿಕೊಟ್ಟ ನಂತರದಲ್ಲಿ ಸಹಕಾರ ಕ್ಷೇತ್ರ ಬದಲಾಗಬೇಕಾದ ಅವಶ್ಯಕತೆ ಉಂಟಾಗಿದ್ದು ನಿಜ. ಸಹಕಾರ ಕ್ಷೇತ್ರದಲ್ಲಿ ಸರ್ಕಾರದ ಹಸ್ತಕ್ಷೇಪವನ್ನು ನಿವಾರಿಸಿದ ಸ್ವಾಯತ್ತತೆಯ ಸ್ವಯಂ ಆಡಳಿತದ ಗಾಳಿ ಬೀಸಿದ್ದು ಮಹತ್ವದ ಬದಲಾವಣೆ. ನಂತರದ ಎರಡು ದಶಕದಲ್ಲಿ ಸಹಕಾರ ಕ್ಷೇತ್ರದಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ. ಆ ಬದಲಾವಣೆಯ ಕಾರಣವಾಗಿ 97ನೇ ಸಂವಿಧಾನ ತಿದ್ದುಪಡಿಯ ಮೂಲಕ ಸಂಪೂರ್ಣ ಸಹಕಾರ ಕ್ಷೇತ್ರಕ್ಕೆ ಸ್ವಾಯತ್ತತೆಯ ಅವಕಾಶವನ್ನು ಮಾಡಿಕೊಡುವ ಪ್ರಯತ್ನವಾಗಿದೆ.

ಆರ್ಥಿಕ ಸುಧಾರಣೆಗಳ ಕಾರಣದಿಂದ ಎಲ್ಲ ಕ್ಷೇತ್ರದಲ್ಲೂ ಸ್ಪರ್ಧೆ ಕಂಡುಬಂದ ನಂತರದಲ್ಲಿ, ಸಹಕಾರ ಕ್ಷೇತ್ರವನ್ನು ಗಮನಿಸಿದಾಗ ಸಹಕಾರ ಬ್ಯಾಂಕುಗಳು ಖಾಸಗೀ ಬ್ಯಾಂಕುಗಳನ್ನು ಮೀರಿಸುವ ಮಟ್ಟದಲ್ಲಿ ಬೆಳೆದು ನಿಂತಿವೆ. ಅನೇಕ ಸಹಕಾರ ಸಂಸ್ಥೆಗಳು ಮಹತ್ವದ ಸಾಧನೆಗಳನ್ನು ಮಾಡಿವೆ. ಅಂತಹ ಸಾಧನೆಗಳನ್ನು ಗಮನಿಸಿದಾಗ ಕಂಡುಬರುವ ಅಂಶವೆಂದರೆ ಆ ಸಂಸ್ಥೆಗಳಲ್ಲಿರುವ ನಿರ್ದೇಶಕರ ಹಾಗೂ ಸಿಬ್ಬಂದಿಗಳ ವೃತ್ತಿಪರತೆ. ಆದರೆ, ಬಹುತೇಕ ಸಹಕಾರ ಸಂಸ್ಥೆಗಳಲ್ಲಿ ಈ ವೃತ್ತಿಪರತೆಯ ಕೊರತೆ ಇದೆ. ಕಾರಣ ಸೂಕ್ತ ತರಬೇತಿ ಅಥವಾ ಶಿಕ್ಷಣ ಇಲ್ಲದಿರುವುದು. ಹಣಕಾಸು ಹಾಗೂ ಸಾಮಾಜಿಕ ಗುರಿಗಳನ್ನು ಹೊಂದಿರುವ ಸಹಕಾರ ಕ್ಷೇತ್ರಕ್ಕಾಗಿ ವೃತ್ತಿಪರರನ್ನು ಸಿದ್ಧಪಡಿಸುವ ಶಿಕ್ಷಣ ಸಂಸ್ಥೆಗಳು ಬೆರಳೆಣಿಕೆಯಷ್ಟು ಮಾತ್ರ.

ಸಹಕಾರ ಕ್ಷೇತ್ರದಲ್ಲಿ ವೃತ್ತಿಪರ ಸಿಬ್ಬಂದಿ ವರ್ಗವನ್ನು ಸಿದ್ಧಪಡಿಸುವ ನಿಟ್ಟಿನಲ್ಲಿ ಅನೇಕ ಪ್ರಯತ್ನಗಳು 1947ರಲ್ಲಿ ಶ್ರೀ ವೈಕುಂಠಬಾಯಿ ಮೆಹತಾರವರು ಹಣಕಾಸು, ಸಹಕಾರ ಹಾಗೂ ಗ್ರಾಮೀಣ ಕೈಗಾರಿಕೆಗಳ ಸಚಿವರಾಗಿದ್ದಾಗಿನಿಂದಲೂ ನಡೆದಿವೆ. ಅವರ ಪ್ರಯತ್ನದ ಸ್ಮರಣೆಯಾಗಿ, 1967ರಿಂದ ಅವರ ಹೆಸರಿನಿಂದಲೇ ಪುಣೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಕಾರ ತರಬೇತಿ ಸಂಸ್ಥೆಯೇ 'ವೈಕುಂಠ ಮೆಹತಾ ನ್ಯಾಶನಲ್ ಇನ್‌ಸ್ಟಿಟ್ಯೂಟ್ ಆಫ್ ಕೋ ಆಪರೇಟೀವ್ ಮ್ಯಾನೇಜ್‌ಮೆಂಟ್'. ಈ ಸಂಸ್ಥೆಯ ಮಾಹಿತಿ ಒದಗಿಸುವ ವೆಬ್‌ತಾಣದ ಪರಿಚಯ ಇಲ್ಲಿದೆ.

**ವೆಬ್‌ತಾಣ 24 : http://vamnicom.gov.in**

- ಸಹಕಾರ ತರಬೇತಿ ಸಂಸ್ಥೆಯ ಆರಂಭ, ವೈಕುಂಠಬಾಯಿ ಮೆಹತಾರವರ ಕಿರು ಪರಿಚಯ, ಸಂಸ್ಥೆಯ ಗುರಿ, ಉದ್ದೇಶ, ಆಡಳಿತ ಸಮಿತಿಯ ವಿವರಗಳು, ಸಾಂಸ್ಥಿಕ ಸ್ವರೂಪ, ಮುಂದಿನ ಕಾರ್ಯಯೋಜನೆಗಳ ಮಾಹಿತಿಯನ್ನು ಈ ವೆಬ್‌ತಾಣದಲ್ಲಿ ನೋಡಬಹುದು.
- ಸಹಕಾರ ತರಬೇತಿಯನ್ನು ಆರು ವಿಭಾಗಗಳಲ್ಲಿ ನೀಡಲಾಗುತ್ತಿದೆ. ಈ ವಿಭಾಗಗಳ ಕುರಿತು ಮಾಹಿತಿ, ಅಂತರರಾಷ್ಟ್ರೀಯ ಸಂಸ್ಥೆಗಳೊಂದಿಗಿನ ಸಹಯೋಗ, ಸಂಸ್ಥೆಯ ಕಾರ್ಯಚಟುವಟಿಕೆಗಳ ವಿವರಗಳು ಈ ತಾಣದಲ್ಲಿ ಲಭ್ಯ.
- ಈ ಸಂಸ್ಥೆಯಲ್ಲಿ ಒದಗಿಸಲಾಗುವ ದೀರ್ಘಾವಧಿ ಹಾಗೂ ಅಲ್ಪಾವಧಿ




ಕೋರ್ಸ್‌ಗಳ ವಿವರಗಳು, ಪಠ್ಯಕ್ರಮ, ಅರ್ಹತೆ, ಅರ್ಜಿ ನಮೂನೆಗಳು, ಶಿಕ್ಷಣದ ವಿಧಾನ ಮುಂತಾದ ಶೈಕ್ಷಣಿಕ ಕೋರ್ಸ್‌ಗಳ ವಿವರಗಳನ್ನು, ಕೋರಿಕೆಯ ಮೇರೆಗೆ, ಸಹಯೋಗದೊಂದಿಗೆ ನಡೆಸಲಾಗುವ ತರಬೇತಿ ಹಾಗೂ ಶಿಕ್ಷಣದ ಮಾಹಿತಿಯನ್ನು ಪಡೆಯಬಹುದು.
- ಸಂಸ್ಥೆಯ ಆಡಳಿತಾತ್ಮಕ ಹಾಗೂ ಭೋದಕ ಸಿಬ್ಬಂದಿಗಳ ವಿವರಗಳು, ಅವರ ವಿಭಾಗ, ತಜ್ಞತೆಯ ವಿವರಗಳು ಹಾಗೂ ಸಂಪರ್ಕ ಇ ಮೇಲ್ ವಿಳಾಸಗಳು ಈ ತಾಣದಲ್ಲಿ ದೊರೆಯುತ್ತದೆ. ಜ್ಞಾನ ಪ್ರಸಾರ ಕಾರ್ಯಕ್ರಮದಡಿಯಲ್ಲಿ ಸಂಶೋಧನಾ ವರದಿ, ಪ್ರಕರಣ ಅಧ್ಯಯನ (ಕೇಸ್ ಸ್ಟಡಿ), ಲೇಖನಗಳು ಇತ್ಯಾದಿಗಳನ್ನು ಈ ತಾಣದಲ್ಲಿ ನೋಡಬಹುದು.
- 2015–17ರ ಸಾಲಿನ ಶೈಕ್ಷಣಿಕ ತಂಡದ ಪ್ರವೇಶ ಪ್ರಕ್ರಿಯೆ 01 ಡಿಸೆಂಬರ್ 2014ರಿಂದ ಆರಂಭಗೊಂಡಿದೆ. ಆಸಕ್ತರು ವೆಬ್‌ತಾಣದಲ್ಲಿ ಹೆಚ್ಚಿನ ವಿವರವನ್ನು ಪಡೆಯಬಹುದು.

ಸಹಕಾರ ಕ್ಷೇತ್ರದಲ್ಲಿ ವೃತ್ತಿಪರತೆಯ ಕೊರತೆಯನ್ನು ನಿವಾರಿಸುವ ನಿಟ್ಟಿನಲ್ಲಿ ಅತ್ಯುತ್ತಮ ಸುಸಜ್ಜಿತ ಕಟ್ಟಡ, ಹವಾನಿಯಂತ್ರಿತ ಗಣಕೀಕೃತ ಕೊಠಡಿಗಳು, ವಿಶಾಲವಾದ ಸಭಾಂಗಣ, ಸಹಕಾರ ಕ್ಷೇತ್ರದಲ್ಲಿ ಅತ್ಯುತ್ತಮವಾದ ಗ್ರಂಥಾಲಯ, ತಜ್ಞ ಉಪನ್ಯಾಸಕರನ್ನು ಹೊಂದಿ ಕಾರ್ಯನಿರ್ವಹಿಸುತ್ತಿದೆ ಈ ತರಬೇತಿ ಸಂಸ್ಥೆ. ಸಹಕಾರ ಕ್ಷೇತ್ರದ ಬಗ್ಗೆ ಯುವಜನತೆಯ ಗಮನವನ್ನು ಸೆಳೆದು, ಉದ್ಯೋಗವಕಾಶವನ್ನು ಒದಗಿಸುವ ನಿಟ್ಟಿನಲ್ಲೂ ಈ ಸಂಸ್ಥೆಯು ಪ್ರಯತ್ನಿಸುತ್ತಿದೆ. ಸಹಕಾರ ಸಂಸ್ಥೆಗಳು ತಮ್ಮಲ್ಲಿನ ಸಿಬ್ಬಂದಿ ವರ್ಗವನ್ನು ವೃತ್ತಿಪರರನ್ನಾಗಿಸುವಲ್ಲಿ ಈ ಸಂಸ್ಥೆಯ ಸಹಯೋಗದೊಂದಿಗೆ ಪ್ರಯತ್ನಿಸಬಹುದು. ಸಹಕಾರ ಸಂಸ್ಥೆಯ ಯಶಸ್ಸಿಗೆ ಅನುಭವಿ ಸಹಕಾರಿ ನಾಯಕರು, ನುರಿತ ವೃತ್ತಿಪರ ಸಿಬ್ಬಂದಿಗಳು ಅತೀ ಅವಶ್ಯ ಎನ್ನುವುದನ್ನು ಗಮನದಲ್ಲಿರಿಸಿಕೊಂಡು 'ಸಹಕಾರ ವೃತ್ತಿಪರರ ಪಡೆ'ಯನ್ನು ರೂಪಿಸಲು ಸಹಕಾರ ಸಂಸ್ಥೆಗಳು ಪ್ರಯತ್ನಿಸಬೇಕಿದೆ.

# 61ನೇ ಅಖಿಲ ಭಾರತ ಸಹಕಾರ ಸಪ್ತಾಹ ಸಮಾರೋಪ ಸಮಾರಂಭದ ವಿವಿಧ ಪತ್ರಿಕೆಗಳಲ್ಲಿನ ವರದಿಗಳು...

## ಸಹಕಾರಿ ಕ್ಷೇತ್ರದ ಆದಾಯ ತೆರಿಗೆ ರದ್ದತಿಗೆ ಧ್ವನಿ ಎತ್ತಿ



## 3 ಕೋಟಿ ವೆಚ್ಚದಲ್ಲಿ ಶೀಘ್ರ ಸಹಕಾರ ಶಿಕ್ಷಣ ಸಂಸ್ಥೆ ನಿರ್ಮಾಣ





## आयकर ठरणार सहकार क्षेत्राला मारक



## ಸಹಕಾರ ಕ್ಷೇತ್ರದ ಮೇಲೆ ಆದಾಯ ಕರ ಬೇಡ





## '25 ಲಕ್ಷ ರೈತರಿಗೆ ಬಡ್ಡಿ ರಹಿತ ಸಾಲ'



ಸಹಕಾರ ಸಪ್ತಾಹದ ಸಮಾರೋಪ ಸಮಾರಂಭ: ಆದಾಯ ತೆರಿಗೆ ರದ್ದತಿಗೆ ಕೇಂದ್ರ ಸರಕಾರದ ಮೇಲೆ

## ಒತ್ತಡ ಹೇರಲು ಎಲ್ಲ ಸಹಕಾರಿಗಳು ಒಂದಾಗಲು ರಾಜ್ಯಪಾಲರ ಕರೆ

## Governor to Honour Cooperative Bodies, Members in Belagavi

Express News Service

**Kalaburagi/ Belagavi:** The 61st Akhila Bharat Sahakara Saptaha, which will conclude in Belagavi on Thursday, will honour cooperative societies and its members, Karnataka Rajya Souharda Samyukta Sahakari president Gurunath Jyanthikar said on Monday.

He told reporters that Governor Vajubhai Rudabhai Vala will inaugurate the valedictory programme at Gandhi Bhavan.

The seven-day programme is organised under the National Cooperative Union of India (NCUI).

The best cooperatives are Channabasava Pattina Souharda Sahakari Niyamita, Gangavati, in Kalaburgi division; Lal Bahadur Pattina Souharda Sahakari Niyamita, Shiraguppi, in Belagavi district; Dharwad Urban Credit Souharda Sahakari Niyamita, Dharwad, in Belagavi division; Gangulli Town Souharda Sahakari Niyamita, Udupi, in Mysuru division; and Seeta Raghava Souharda Sahakari Bank, Hosadurga, in Bengaluru division.

The best souharda sahakaris in individual category are; R Satyanarayana of Sindhanur, Kalaburagi division; Balappa Basappa Belakuda, Kalloli, Belagavi district; Subrahmanya Hegde, Sirsi, Belagavi division; and N S Jayakumar of Tumakuru, Bengaluru division, he said.

### 'Entrust Jan Dhan to Co-ops'

Jyanthikar urged Prime Minister Narendra Modi to entrust the Jan Dhan scheme to cooperative societies as it would help people and the societies. Like e-stamp supplying facility provided to cooperative societies, Jan Dhan should also be entrusted to them.

There are more than six lakh cooperative societies in the country with more than 25 crore members, he said.

The societies have provided jobs to 40 lakh people thereby contributing to the growth of the country. In Karnataka, there are 3,000 cooperative societies and 25 lakh members. Around 44,000 people are employed in the societies, he said.

At a news conference here on Monday, MLA and former minister Laxman Savadi, who is chairman of the reception committee, said Ministers Satish Jarkiholi and H S Mahadev Prasad will be the chief guests.

The seven-colour cooperative flag will be hoisted during the inauguration of the programme. The Governor will release a special issue of Swabhimani Sahakari magazine of Karnataka State Souhdarda Federal Cooperative Ltd.

MLAs G T Deve Gowda and Feroz Saith, elected representatives of the district and about 2,000 cooperatives from the district will take part. S A Siddhanti, former regional director of Regional Institute of Co-operative Management, will deliver a special lecture.

Savadi, who was the cooperation minister in the BJP government, said the cooperatives in the state has ₹3,130 crore share capital, ₹28,901 crore deposit and ₹58,692 crore working capital leading to a profit of more than ₹160 crore.

## ಕರ್ನಾಟಕದಲ್ಲಿಯೇ ಅತಿ ಹೆಚ್ಚು ರೈತರಿಗೆ ಬೆಳೆ ಸಾಲ ವಿತರಣೆ ಮಾಡಿದ ಬೆಳಗಾವಿ ಸಹಕಾರಿ ಬ್ಯಾಂಕ್-ಮಹಾದೇವ ಪ್ರಸಾದ



## ಸಹಕಾರಿ ಕ್ಷೇತ್ರ ಆದಾಯ ತೆರಿಗೆಯಿಂದ ಮುಕ್ತವಾಗಲಿ

ಸಹಕಾರ ಸಪ್ತಾಹ ಸಮಾರೋಪ ಸಮಾರಂಭದಲ್ಲಿ ರಾಜ್ಯಪಾಲ ವಜುಭಾಯಿ



ಸ್ವಾಭಿಮಾನಿ ಸಹಕಾರಿ

Swabhimani Sahakari, Monthly, Posted at GPO-MBC Bengaluru Post Office 560001,
Posting Day 8th. Registered No. RNP/BGW/1744/2014-16.
RNI No. KARBIL - 2004/18001. Pages 20

## ಸ್ವಚ್ಛ ಭಾರತ ಸ್ವಸ್ಥ ಭಾರತ : ಸ್ವಚ್ಛ ಭಾರತಕ್ಕಾಗಿ ಸಹಕಾರಿಗಳು
## ಜನವರಿ 1 ಸೌಹಾರ್ದ ಸಹಕಾರಿ ದಿನವನ್ನು ಹಾಗೂ ಜನವರಿ 1 ರಿಂದ 7ರವರೆಗೆ ಸ್ವಚ್ಛತಾ ಸಪ್ತಾಹವನ್ನು ಆಚರಿಸಲು ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಗುರುನಾಥ ಜಾಂತಿಕರ ಮನವಿ



ರಾಷ್ಟ್ರದಾದ್ಯಂತ ಸ್ವಚ್ಛತಾ ಕಾರ್ಯಕ್ರಮಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡುವ ಆಂದೋಲನವನ್ನು ಹಾಕಿಕೊಂಡಿರುವ ಕೇಂದ್ರ ಸರ್ಕಾರದ ಕಾರ್ಯಕ್ರಮಕ್ಕೆ ಪೂರಕವಾಗಿ ರಾಜ್ಯದ ಸೌಹಾರ್ದ ಸಹಕಾರಿಗಳು ಜನವರಿ 1 ರಂದು ಸೌಹಾರ್ದ ಸಹಕಾರಿ ದಿನವನ್ನು ಆಚರಿಸುವ ಕಾರ್ಯಕ್ರಮವನ್ನು ಪ್ರತಿ ವರ್ಷ ಹಮ್ಮಿಕೊಳ್ಳುತ್ತಿರುವುದರ ಜೊತೆಯಲ್ಲಿ ಈ ವರ್ಷ ವಿಶೇಷವಾಗಿ ಸ್ವಚ್ಛತಾ ಕಾರ್ಯಕ್ರಮಕ್ಕೆ ಪ್ರಥಮ ಆದ್ಯತೆಯನ್ನು ನೀಡುವ ಹಾಗೂ ಒಂದು ವಾರ ಸ್ವಚ್ಛತಾ ಸಪ್ತಾಹವನ್ನು ಆಚರಿಸಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರರವರು ರಾಜ್ಯದ ಎಲ್ಲಾ ಸಹಕಾರಿಗಳಿಗೆ ವಿನಂತಿಸಿದ್ದಾರೆ.

ಸ್ವಚ್ಛ ಭಾರತ

ಸ್ವಚ್ಛತೆಯ ಕಡೆಗೆ ಸಹಕಾರಿಗಳ ಒಂದು ಹೆಜ್ಜೆ

ಜೀವನದ ಪ್ರತಿಯೊಂದು ಹಂತದಲ್ಲಿ ವಿಶೇಷವಾಗಿ ಮನೆ–ಕಛೇರಿ–ಶಾಲೆಗಳು–ಆಸ್ಪತ್ರೆಗಳು–ಹಾಸ್ಟೆಲ್‌ಗಳು–ಉದ್ಯಾನವನಗಳು–ದೇವಸ್ಥಾನಗಳು–ನಮ್ಮ ನಮ್ಮ ಓಣಿಗಳು – ಗಲ್ಲಿಗಳು– ಕಲ್ಯಾಣ ಮಂಟಪಗಳು–ಬಸ್ ನಿಲ್ದಾಣಗಳು– ರೆಲ್ವೆ ನಿಲ್ದಾಣಗಳು– ನ್ಯಾಯಾಲಯಗಳ ಆವರಣಗಳು– ಹೀಗೆ ಎಲ್ಲಾ ತಾಣಗಳಲ್ಲಿಯೂ ಸ್ವಚ್ಛತೆ ಇರಬೇಕೆಂಬುದು ಸಹಕಾರಿಯ ವಿಷಯವಾಗಬೇಕು. ಇವುಗಳನ್ನು ವ್ಯವಸ್ಥಿತವಾಗಿ ನಿರ್ವಹಿಸುವ ಕಾರ್ಯವನ್ನು ಪ್ರಾರಂಭಿಸಬೇಕು. ಈ ಉದ್ಯಾನವನದ ನಿರ್ವಹಣೆ ಇಂತಹ ಸೌಹಾರ್ದ ಸಹಕಾರಿಯದ್ದು ಎಂಬ ಬೋರ್ಡ್ ಹಾಕಬೇಕು. ಇದು ನಿತ್ಯ ಕ್ರಮವಾಗಬೇಕು ಎಂಬುದು ಸಂಯುಕ್ತ ಸಹಕಾರಿಯ ಅಪೇಕ್ಷೆಯಾಗಿದೆ. ಈ ನಿಟ್ಟಿನಲ್ಲಿ ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ನಿರ್ದೇಶಕರು, ಅಧಿಕಾರಿಗಳು, ಸಿಬ್ಬಂದಿಗಳು, ಸದಸ್ಯರು ಹಾಗೂ ಸಾರ್ವಜನಿಕರು ಎಲ್ಲರನ್ನೂ ಸ್ವಚ್ಛತೆಯ ಬಗ್ಗೆ ಜಾಗೃತಗೊಳಿಸುವ, ಅನುಷ್ಠಾನಗೊಳಿಸುವ ಕಾರ್ಯಕ್ರಮ ಸೌಹಾರ್ದ ಸಹಕಾರಿ ದಿನ ಹಾಗು ಸ್ವಚ್ಛತಾ ಸಪ್ತಾಹವನ್ನು ಆಚರಿಸಬೇಕು. ಆಚರಿಸಿದ ಬಗ್ಗೆ ಸಂಯುಕ್ತ ಸಹಕಾರಿಗೆ ಫೋಟೊ ಸಹಿತ ವರದಿ ನೀಡಬೇಕು. ನಿಮ್ಮ ವರದಿಯನ್ನು ಸ್ವಾಭಿಮಾನಿಯಲ್ಲಿ ಪ್ರಕಟಿಸಲಾಗುವುದು. ಮತ್ತು ಸೌಹಾರ್ದ ಸಹಕಾರಿಗಳ ಈ ಕ್ರಮದ ಬಗ್ಗೆ ಸರಕಾರಕ್ಕೆ ವರದಿಯನ್ನು ಸಲ್ಲಿಸಲಾಗುವುದು.

## ಜಂಗಮ ಸೌಹಾರ್ದ ಸಹಕಾರಿ ನಿ., ದಾವಣಗೆರೆ ಸಹಕಾರಿಯ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರ ಆಯ್ಕೆ



ಶ್ರೀ ಕೆ.ಎಂ.ಬಕ್ಕೇಶ್ವರ ಸ್ವಾಮಿ
ಅಧ್ಯಕ್ಷರು



ಶ್ರೀ ಸಿ.ಎಂ.ಜಯದೇವಯ್ಯ
ಗುಮ್ಮನೂರು, ಉಪಾಧ್ಯಕ್ಷರು

## ಹೂಗಾರ ವಿವಿಧೋದ್ದೇಶಗಳ ಸೌಹಾರ್ದ ಸಹಕಾರಿ ನಿ., ಹುಬ್ಬಳ್ಳಿ ಸಹಕಾರಿಯ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರ ಆಯ್ಕೆ



ಶ್ರೀ ಲೋಚನೇಶ ಬಿ.
ಹೂಗಾರ, ಅಧ್ಯಕ್ಷರು



ಶ್ರೀ ಸುರೇಶ್ ಎಂ. ಹೂಗಾರ
ಉಪಾಧ್ಯಕ್ಷರು

ಬೆಳಗಾವಿ ವಿಭಾಗೀಯ ಕಛೇರಿಯ ವಿಳಾಸ : ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ವಿಭಾಗೀಯ ಕಛೇರಿ #436, ಮೊದಲನೆಯ ಮಹಡಿ, ಹುಯಿಲಗೋಳ ಕಟ್ಟಡ ಶನಿ ಮಂದಿರ ಹತ್ತಿರ, ಪಾಟೀಲ ಗಲ್ಲಿ, ಬೆಳಗಾವಿ–590001 ದೂ.ಸಂ : 0831–2401551.

ಗುಲ್ಬರ್ಗಾ ವಿಭಾಗೀಯ ಕಛೇರಿಯ ವಿಳಾಸ : ಗುಲ್ಬರ್ಗಾ ನಂ 1–4/3 ಎ ಸಂಜೀವರಾವ್ ದೇಸಾಯಿ ಬಡಾವಣೆ, ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ ಗಾರ್ಡನ್ ರಸ್ತೆ, ಗುಲ್ಬರ್ಗಾ – 585102. ದೂ. 08472–270222.

Edited, Printed and Published by Sharangouda G. Patil –Managing Director, on behalf of Karnataka State Souharada Federal Co operative Ltd., Nirman Bhavan complex, Dr. Rajkumar Road, 1st Block, Rajajinagar, Bangalore-560 010